7. ನಿಯಮ 69ರ ಮೇಲಿನ ಚರ್ಚೆ

ವಿಷಯ: ಪ್ರಾದೇಶಿಕ ಅಸಮಾನತೆ ನವಾರಣೆ ಮತ್ತು ಡಾ.ಡಿ.ಎಂ. ನಂಜುಂಡಪ್ಪ ವರದಿ ಅನುಷ್ಟಾನ ಕುರಿತು.

ಶ್ರೀ ಬಿ. ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿ ಮತ್ತು ಹಣಕಾಸು ಸಚಿವರು): ಮಾನ್ಯ ಅಧ್ಯಕ್ಷರೆ, ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ 8 ವರ್ಷಗಳ ಒಂದು ವಿಶೇಷ ಅಭಿವೃದ್ಧಿ ಯೋಜನೆಯನ್ನು ನಮ್ಮ ಆಯವ್ಯಯ ಮಂಡನೆ ಮಾಡುವ ಕಾಲದಲ್ಲಿ ಈ ಮನೆಯ ಮುಂದೆ ಅವಗಾಹನೆಗಾಗಿ ಇಟ್ಟು ಅದಕ್ಕೆ ಮಂಜೂರಾತಿ ಕೂಡ ಸಿಕ್ಕಿದೆ. ಡಾ: ಡಿ.ಎಂ. ನಂಜುಂಡಪ್ಪ ಸಮಿತಿ 2000ನೇ ಸಾಲಿನ ಅಕ್ಟೋಬರ್ ತಿಂಗಳಲ್ಲಿ ನೇಮಕವಾಗಿತ್ತು. ಅವರು ಮಧ್ಯಂತರ ವರದಿ ನೀಡಿದ್ದು 2001ರಲ್ಲಿ. ಮಧ್ಯಂತರ ವರದಿ ಏತಕ್ಕೆ ನೀಡುತ್ತಾರೆ? ತತ್ಕ್ಷಣ ಈ ಯೋಜನೆ ಕಾರ್ಯರೂಪಕ್ಕೆ ಬರಬೇಕು, ಅ ಭಾಗಲ್ಲೇನು ಅಭಿವೃದ್ಧಿ ಕಾರ್ಯ ಕುಂಠಿತವಾಗಿದೆ, ಅಲ್ಲಿಯ ಅಭಿವೃದ್ಧಿಯ ಕಾರ್ಯಕ್ಕೆ ಈ ವರದಿ ಸಹಾಯವಾಗಬೇಕೆಂದು ಮಧ್ಯಂತರ ವರದಿಯನ್ನು 2001ರಲ್ಲಿ ಕೊಟ್ಟಿದ್ದಾರೆ. ಅಂತಿಮ ವರದಿಯನ್ನು 2002ರಲ್ಲಿ ಕೊಟ್ಟರು. ಅದರಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕು 39, ಅತೀ ಹಿಂದುಳಿದ ತಾಲ್ಲೂಕು 40, ಹಿಂದುಳಿದ ತಾಲ್ಲೂಕು 35 ಹೀಗೆ ಒಟ್ಟು 114 ತಾಲ್ಲೂಕುಗಳ ಅಭಿವೃದ್ಧಿಯಾಗಬೇಕು. ಇದರ ಬಗ್ಗೆ ನಾನು ವಿವರಿಸಿ ಹೇಳುವುದಾದರೆ, ಅತ್ಯಂತ ಅತೀ ಹಿಂದುಳಿದ ತಾಲ್ಲೂಕು ಪೈಕಿ 21 ತಾಲ್ಲೂಕುಗಳು ಗುಲ್ಬರ್ಗಾ ವಿಭಾಗದಲ್ಲಿ, ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಅತೀ ಕಡಿಮೆ ಸಂಖ್ಯೆ ಎಂದರೆ, 2 ಅತ್ಯಂತ ಹಿಂದುಳಿದ ತಾಲ್ಲೂಕು ಮೈಸೂರು ವಿಭಾಗದಲ್ಲಿ ಬರುತ್ತವೆ. 39 ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ 26 ತಾಲ್ಲೂಕುಗಳು ಉತ್ತರ ಕರ್ನಾಟಕದಲ್ಲಿ, 13 ತಾಲ್ಲೂಕುಗಳು ದಕ್ಷಿಣ ಕರ್ನಾಟಕದಲ್ಲಿ ಒಟ್ಟಾರೆ ಉತ್ತರ ಕರ್ನಾಟಕ ದಕ್ಷಿಣ ಕರ್ನಾಟಕಕ್ಕಿಂತ ಹೆಚ್ಚು ಹಿಂದುಳಿದಿರುವುದು ಬಹಳ ಸ್ಪಷ್ಟವಾಗಿ ಗಮನಕ್ಕೆ ಬರುತ್ತಿದೆ. ಒಟ್ಟು 114 ಹಿಂದುಳಿದ ತಾಲ್ಲೂಕುಗಳಲ್ಲಿ ಉತ್ತರ ಕರ್ನಾಟಕದಲ್ಲಿ 59, ದಕ್ಷಿಣ ಕರ್ನಾಟಕದಲ್ಲಿ 55 ತಾಲ್ಲೂಕುಗಳಿರುವಂಥದ್ದು ತಮಗೆಲ್ಲ ಗೊತ್ತಿದೆ. 2001ರಲ್ಲಿ ಮಧ್ಯಂತರ ವರದಿ ಬಂದ ಮೇಲೆ ಧೂಳು ಸಹ ಹೊಡೆಯುವವರು ಇಲ್ಲದೆ ಕಸದ ಬುಟ್ಟಿಯಲ್ಲಿ ಬಿದ್ದಂಥ ರೀತಿಯಲ್ಲಿ ಅದು ಬಿದ್ದಿತ್ತು. ಈ ಸಮ್ಮಿಶ್ರ ಸರ್ಕಾರ ಬಂದ ಮೇಲೆ ಆ ಧೂಳನ್ನು ಕೊಡವಿ ಇದಕ್ಕೇನಾದರೂ ಒಂದು ಕಾಯಕ ಮಾಡಬೇಕೆನ್ನುವ ಇಚ್ಛಾಶಕ್ತಿಯನ್ನು ಪ್ರಕಟ ಮಾಡಿ, ಬೆಳಗಾವಿಯಲ್ಲಿ ನಮ್ಮ ಮೈತ್ರಿ ಸರ್ಕಾರ ವಿಶೇಷ

ಅಧಿವೇಶನವನ್ನು ನಡೆಸುವ ಸಂದರ್ಭದಲ್ಲಿ ಡಾ: ನಂಜುಂಡಪ್ಪ ವರದಿಯನ್ನು ಅನುಷ್ಠಾನಗೊಳಿಸುವುದಕ್ಕೆ ಒಂದು ಸ್ಪಷ್ಟ ಚಾಲನೆ ಕೊಡುತ್ತೇವೆ ಎನ್ನುವಂಥ ಭರವಸೆಯನ್ನು ಆ ಭಾಗದ ಜನರಿಗೆ ನಾವು ಕೊಟ್ಟಿದ್ದೆವು. ಅಂದರೆ, ಅಲ್ಲಿಯವರೆಗೆ ವರದಿ ಬಂದು ಸುಮಾರು 4 ವರ್ಷಗಳಾದರೂ ಸಹ ಅಧಿಕಾರದಲ್ಲಿದ್ದಂಥ ನಮ್ಮ ಸ್ನೇಹಿತರು ಆ ಕಡೆ ಗಮನವನ್ನು ಕೊಡುವುದಕ್ಕಾಗಲಿಲ್ಲ ಎನ್ನುವುದು ಅತ್ಯಂತ ವಿಷಾದದ ಸಂಗತಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಮೈತ್ರಿ ಸರ್ಕಾರ ಒಂದು ರಾಜಕೀಯ ಇಚ್ಛಾಶಕ್ತಿಯನ್ನು ವ್ಯಕ್ತಪಡಿಸಿ ನಾವು ಸಿದ್ಧಪಡಿಸಿರುವ 8 ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ 50:30:20 ಈ ಪ್ರಮಾಣದಲ್ಲಿ ಹಣ ಹಂಚಿಕೆ ಮಾಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಹೈದ್ರಾಬಾದ್-ಕರ್ನಾಟಕದ ಪ್ರತಿನಿಧಿಗಳು ಸಭೆ ನಡೆಸಿ ಅದರಲ್ಲಿರುವ ಕೆಲವು ಕೊರತೆಗಳನ್ನು ಗುರುತು ಮಾಡುವ ಪ್ರಾಮಾಣಿಕ ಪ್ರಯತ್ನವನ್ನು ಅವರು ಮಾಡಿದ್ದಾರೆ. ಮುಖ್ಯವಾಗಿ 60:24:16 ಪ್ರಮಾಣದಲ್ಲಿ ಹಣವನ್ನು ಹಂಚಿಕೆ ಮಾಡುವ ಸಲಹೆಯನ್ನು ಕೊಟ್ಟಿದ್ದಾರೆ. ಸಂಪನ್ಮೂಲದ ಲಭ್ಯತೆ ಆಧರಿಸಿ ಮುಂದೆ ಬರುವ ದಿವಸಗಳಲ್ಲಿ ಆ ರೀತಿಯ ಬದಲಾವಣೆ ತರುವುದಕ್ಕೋಸ್ಕರ ಯಾವುದೇ ರೀತಿ ನಾವು ಹಿಂದೆ ಮುಂದೆ ನೋಡುವುದಿಲ್ಲ. ಇವತ್ತು ಡಾ: ನಂಜುಂಡಪ್ಪ ವರದಿಯಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣೆಗೆ 8 ವರ್ಷಗಳಲ್ಲಿ ಒಟ್ಟು 31 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು. 8 ವರ್ಷಗಳಲ್ಲಿ normal course ನಲ್ಲಿ 15 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ, ಉಳಿದ 16 ಸಾವಿರ ಕೋಟಿ ರೂಪಾಯಿಗಳನ್ನು ವಿಶೇಷ ಅನುದಾನವನ್ನು ರೂಪಿಸಿ ಖರ್ಚು ಮಾಡಬೇಕೆನ್ನುವುದು ಆ ವರದಿಯ ಅಪೇಕ್ಷೆ ಇದೆ. 2007–08ರ ಆಯವ್ಯಯದಲ್ಲಿ ಮೊದಲ ಬಾರಿಗೆ 2007–08ರಿಂದ ಅಂದರೆ ಈ ವರ್ಷದಿಂದ 2014–15ರವರೆಗೆ ಅಂದರೆ 8 ವರ್ಷಗಳ ಈ ಯೋಜನೆಯನ್ನು ಮಾಡಿ ಮೊದಲ ವರ್ಷಕ್ಕೆ 1571.50 ಕೋಟಿ ರೂಪಾಯಿಗಳನ್ನು Plan allocation ನಲ್ಲಿ ತೆಗೆದಿಟ್ಟಿದ್ದೇವೆ. ಒಂದು ತಪ್ಪು ಗ್ರಹಿಕೆ ಏನದೆ ಎಂದರೆ ನಮ್ಮ normal course ನಲ್ಲಿ ಏನು ಕಾರ್ಯಕ್ರಮಗಳಿವೆ ಇದಕ್ಕೆ ವಿಶೇಷವಾದ ಏನೊಂದು ಕಾರ್ಯಕ್ರಮಗಳನ್ನೂ ಯೋಚನೆ ಮಾಡಿಲ್ಲ ಎನ್ನುವ ಭಾವನೆ ಇವತ್ತು ನಮ್ಮ ಗೌರವಾನ್ವಿತ ಸದಸ್ಯರಲ್ಲಿ ಇರುವಂತೆ ಕಾಣುತ್ತದೆ. ಇಲ್ಲಿ ನೊಂದು ಹೇಳುವ ಸಂಗತಿ ಏನೆಂದರೆ, ಇದನ್ನು ತತ್‍ಕ್ಷಣ ಅನುಷ್ಠಾನಕ್ಕೆ ತಂದಿದ್ದರೆ 2003 ರಿಂದ 2010ರವರೆಗಾಗಿ ಅಂದರೆ ಈಗಾಗಲೇ 4 ವರ್ಷಗಳ ಕಾಲ ಅದರ ಪ್ರಗತಿಯನ್ನು ನಾವು ಕಾಣಬೇಕಾಗಿತ್ತು. ಬೇರೆ ಯಾವುದೋ

ಒಂದು ವಿಶೇಷ ಕಾರಣಕ್ಕಾಗಿ ಆ ಕಡೆ ಅಧಿಕಾರದಲ್ಲಿದ್ದಂಥ ಜನ ಗಮನವನ್ನು ಕೊಡಲಿಕ್ಕಾಗಲಿಲ್ಲ. ನಾನು ಬಹಳ ಸ್ಪಷ್ಟ ಮಾಡುವುದಕ್ಕೆ ಇಚ್ಛೆಪಡುತ್ತೇನೆ, regular budget ಅಲ್ಲದೆ ಹೊಸದಾಗಿ ಈ ಭಾಗದ ಅಭಿವೃದ್ಧಿಗಾಗಿ 1571.50 ಕೋಟಿ ರೂಪಾಯಿಗಳನ್ನು ನಾವು ಇಟ್ಟಿದ್ದೇವೆ. ಉದಾಹರಣೆಗಾಗಿ, over and above normal allocation ಬಿಟ್ಟು ನೀರಾವರಿಗೆ 300 ಕೋಟಿ ರೂಪಾಯಿಗಳನ್ನು ವಿಶೇಷವಾಗಿ ಅಳವಡಿಸಿದ್ದೇವೆ. transport ಗೆ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ: 17, 782 ಕೋಟಿ ರೂಪಾಯಿಗಳ ಒಳಗಡೆ ಈ ಹಣ ಇದೆಯೇ? ಅಥವಾ separate ಆಗಿದೆಯೇ ಎಂದು ಮೊದಲು ಹೇಳಿಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅದರೊಳಗೆಯೇ ಇದೆ.

ಶ್ರೀ ಸಿದ್ದರಾಮಯ್ಯ: ಅದರೊಳಗೇ ಇದ್ದರೆ ಮತ್ತೇಕೆ plan ಅನ್ನು 17,782 ಕೋಟಿ ರೂಪಾಯಿಗಳು ಎಂದು ಹೇಳುತ್ತೀರಿ? Why do you claim that the plan size is Rs. 17,782 crores? ಹಾಗಾದರೆ, you piease say. ನಮ್ಮ plan size ಈ ವರ್ಷಕ್ಕೆ 16,221 ಕೋಟಿ ಎಂದು ಹೇಳಿ.

ಅಧ್ಯಕ್ಷರು: ಆಯಿತು, ಅವರು ಮೊದಲು ಉತ್ತರ ಕೊಟ್ಟು ಮುಗಿಸಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಾನು ಹೇಳುವುದನ್ನು ದಯವಿಟ್ಟು ಕೇಳಿ.

ಅಧ್ಯಕ್ಷರು: ನೀವು clarification ಕೇಳಬಹುದು. ಅದು ಬಿಟ್ಟು ಈ ರೀತಿ interfere ಆದರೆ ಹೇಗೆ?

ಶ್ರೀ ಸಿದ್ದರಾಮಯ್ಯ: I am not going to interrupt you.

ಅಧ್ಯಕ್ಷರು: ಉತ್ತರ ಕೊಡಲು ಅವರಿಗೆ ಅವಕಾಶ ಕೊಡಿ. ಅವರು ಕೊಟ್ಟ ಮೇಲೆ ನೀವು ಯಾವ clarification ಕೇಳಬೇಕೋ ಕೇಳಿ.

ಶ್ರೀ ಸಿದ್ದರಾಮಯ್ಯ: ನಾನು ಅವರ ದಾರಿ ತಪ್ಪಿಸುವುದಕ್ಕೆ ಹೋಗುತ್ತಿಲ್ಲ ಅಥವಾ ಅವರನ್ನು disturb ಮಾಡುವುದಕ್ಕೆ ಹೋಗುತ್ತಿಲ್ಲ. ಬಜೆಟ್‌ನಲ್ಲಿ ನಮ್ಮ ರಾಜ್ಯದ ಯೋಜನಾ ಗಾತ್ರ 17,782 ಕೋಟಿ ಎಂದು ಒಂದು ಕಡೆ ಹೇಳಿದ್ದಾರೆ. ಅದಕ್ಕೆ programme ಗಳನ್ನೆಲ್ಲ ನಿಗದಿ ಮಾಡಿದ್ದಾರೆ. ಎಷ್ಟೆಷ್ಟು percentage,

ಎಷ್ಟು ಹಣ, Allocation of plan ಹೇಳಿದ್ದಿರಿ. 17,782 ಕೋಟಿ ರೂಪಾಯಿಗಳಿಗೂ plan allocation ಹೇಳಿಬಿಟ್ಟಿದ್ದೀರಿ. ಎರಡನೆಯದಾಗಿ, ಇನ್ನೊಂದು ಕಡೆ ನಂಜುಂಡಪ್ಪ ವರದಿ ಪ್ರಕಾರ ಅತ್ಯಂತ ಹಿಂದುಳಿದ, ಅತಿ ಹಿಂದುಳಿದ, ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೋಸ್ಕರ 1571 ಕೋಟಿ ರೂಪಾಯಿ ಎಂದು ಹೇಳುತ್ತಾರೆ. That confusion should not be there. ಅದಕ್ಕೆ, ಯಡಿಯೂರಪ್ಪನವರು ಸ್ಪಷ್ಟವಾಗಿ ಹೇಳಬೇಕು. ಈ 1571 ಕೋಟಿ ರೂಪಾಯಿ ಆ 17,781 ಕೋಟಿ ರೂಪಾಯಿಗಳ ಒಳಗಡೆ ಬರುತ್ತಿದೆ. ಹಾಗಾಗಿ ಅದರಲ್ಲ 1571 ಕೋಟಿ ರೂಪಾಯಿ ತೆಗೆದು ಹಾಕಿದಾಗ allocations ಎಲ್ಲಾ change ಆಗುತ್ತದೆ. ಈಗ ನೀವು ಎಷ್ಟೆಷ್ಟು ಹಣ ಇಟ್ಟಿದ್ದೀರಿ? 3145 ಕೋಟಿ ರೂಪಾಯಿಗಳನ್ನು ನೀರಾವರಿಗೆಂದು ಇಟ್ಟಿದ್ದರೆ, again that allocation will come down. Agriculture ಗೆ ಇಟ್ಟಿರುವ ಹಣ ಕಡಿಮೆಯಾಗುತ್ತದೆ.

ಅಧ್ಯಕ್ಷರು: ಅವರು ಉತ್ತರ ಹೇಳಲಿ.

ಶ್ರೀ ಸಿದ್ದರಾಮಯ್ಯ: power ಗೆ ಇಟ್ಟಿರುವ ಹಣ ಕಡಿಮೆಯಾಗುತ್ತದೆ. ಅದು ಆಗಬೇಕಲ್ಲವೇ? ಆದ್ದರಿಂದ, Plan size ಏನಾಗುತ್ತದೆ? Plan size for the Year 2007-08 16,621 ಕೋಟಿ ಆಗುತ್ತದೆಯೇ ಹೊರತು 17,782 ಕೋಟಿ ರೂಪಾಯಿ ಆಗುವುದಿಲ್ಲ. ಅದನ್ನು ಸ್ಪಷ್ಟಪಡಿಸಬೇಕು.

ಅಧ್ಯಕ್ಷರು: ಅವರು ಉತ್ತರ ಹೇಳಲಿ. ಅವರು ಏನು ಹೇಳುತ್ತಾರೋ ಹೇಳಲಿ.

ಶ್ರೀ ಸಿದ್ದರಾಮಯ್ಯ: ಇಲ್ಲದಿದ್ದರೆ, ಏನಾಗುತ್ತದೆಂದರೆ, ಒಂದು ಕಡೆ Plan size ಅಷ್ಟಿದೆ, ಹಣ ಇಷ್ಟಿದೆ ಮತ್ತು ಇದು ಕಾಗದದ ಮೇಲೆ ಇಟ್ಟ ಹಾಗೆ ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಬಹಳ ವರ್ಷಗಳ ಕಾಲ ಹಣಕಾಸಿನ ಸಚಿವರಾಗಿ ಇಲ್ಲಿ ಕೆಲಸ ಮಾಡಿದಂಥ ಹಿರಿಯರಾದ ಸಿದ್ದರಾಮಯ್ಯನವರು ಯಾವುದೇ ಒಂದು ಕಾರ್ಯಕ್ರಮವನ್ನು ರೂಪಿಸಿದಾಗ plan ನಲ್ಲಿ ಅಥವಾ non planನಲ್ಲಿ allocation ಮಾಡಬೇಕಾಗುತ್ತದೆ. ತಾವು ಕೇಳಬೇಕಾದ ಪ್ರಶ್ನೆ ಏನು? ಈ 1571 ಕೋಟಿ ರೂಪಾಯಿಗಳನ್ನು ಆ ಭಾಗದ ಅಭಿವೃದ್ಧಿಗೇನು ಕೊಡುತ್ತಿದ್ದೇವೆ, ಬೇರೆ regular ಯೋಜನೆಗಳಲ್ಲಿ ನೀವು ಕಡಿತ ಮಾಡಿದ್ದೀರಿ, ಹಾಗಾಗಿ ನೀವೇನು ಪ್ರಗತಿ ಮಾಡಿದ ಹಾಗಾಯಿತು. ಏನು ಕೊಟ್ಟಂತಾಯಿತು

ಎಂದು ಪ್ರಶ್ನೆ ಕೇಳಬೇಕು. ನಾನು ಮೊದಲ ಬಾರಿಗೆ ಈ confusion ಇರಬಾರದೆಂದು ಒಂದು document ಅನ್ನು ನಿಮ್ಮ ಕಣ್ಣ ಮುಂದೆ ಇಟ್ಟಿದ್ದೇನೆ. 8 ವರ್ಷಗಳಲ್ಲಿ ಪ್ರತಿ ವರ್ಷ ನಾನು ಹೇಗೆ ಹಣವನ್ನು ಖರ್ಚು ಮಾಡುತ್ತೇನೆಂದು ಹೇಳಿದ್ದೇನೆ. ಆದ್ದರಿಂದ, ತಮ್ಮ ಮನಸ್ಸಿನಲ್ಲಿ ಈ ಗೊಂದಲ ಯಾವುದೇ ಕಾರಣಕ್ಕೂ ಇರಲಿಕ್ಕೆ ಸಾಧ್ಯವಿಲ್ಲ. ಈ ವರ್ಷ ನೀರಾವರಿಗೆ 300 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಡುತ್ತಿದ್ದೇವೆ. Transport Department ನಲ್ಲಿ Development of infrastructure ಗೆ 100 ಕೋಟಿ ರೂಪಾಯಿಗಳನ್ನು extra ಕೊಡುತ್ತಿದ್ದೇವೆ. ವಿಮಾನ ನಿಲ್ದಾಣಗಳ ಅಭಿವೃದ್ಧಿಗಾಗಿ ಮೂಲಭೂತ ಸೌಲಭ್ಯಗಳಿಗೋಸ್ಕರ 78 ಕೋಟಿ ರೂಪಾಯಿಗಳ ಕ್ರಿಯಾ ಯೋಜನೆ ಇದ್ದು 47 ಕೋಟಿ ರೂಪಾಯಿಗಳನ್ನು ನಾವು ತೆಗೆದಿಟ್ಟಿದ್ದೇವೆ. ಇಂಧನ ಇಲಾಖೆಗೆ 250 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. Housing ಗೆ ವಿಶೇಷವಾಗಿ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ, textile Park ಇತರೆ ಬೇರೆ ಬೇರೆ ವಿಷಯಕ್ಕಾಗಿ 50 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. Rural Development ಗೆ 160 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. Dairy Developments ಗೋಸ್ಕರ 40 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಇದಲ್ಲದೆ rural roads ಗೆಂದು ಬೇರೆ ಹೆಡ್‌ನಲ್ಲಿ 125 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇನೆ. Rural Water Supply ಗೆ 90 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇನೆ. ನಾನು ಮುಂದಿನ 8 ವರ್ಷಗಳಲ್ಲಿ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ತೊಂದರೆ ಕೊಡುವುದಿಲ್ಲ. ತೊಂದರೆ ಕೊಡುವ ಸ್ವಭಾವ ನನ್ನದಲ್ಲ. ತಮ್ಮ ಬಜೆಟ್ ಭಾಷಣದ ಪುಟ 130, ಅನುಬಂಧ-1ರಲ್ಲಿ ನೋಡಿ. ತಾವು 2007-08ನೇ ಸಾಲಿನ ವಿಭಾಗವಾರು ರಾಜ್ಯ ಯೋಜನಾ ಹಂಚಿಕೆ ಇದರಲ್ಲಿ ಈಗಾಗಲೇ ಹಣ ಹಂಚಿದ್ದೀರಿ. ಹೇಗೆಂದರೆ, ಆರ್ಥಿಕ ಸೇವೆಗೆ, ಕೃಷಿಗೆ, ಗ್ರಾಮೀಣಕ್ಕೆ ವಿಶೇಷ ಪ್ರದೇಶದ ಯೋಜನೆಗಳಿಗೆ, ನೀರಾವರಿಗೆ ಎಷ್ಟು ಎಂದು ಹೇಳಿದ್ದೀರಿ. ಎಲ್ಲಾ ಸೇರಿ ನೀವು ಹಂಚಿದ್ದು 17,782 ಕೋಟಿ ರೂಪಾಯಿಗಳು. ಅಂದಾಗ ಇದರಲ್ಲಿಯೇ ಅದೂ ಕೂಡ ಬಂತು. ನೀವು ಹೆಚ್ಚಿನ ಹಣ ಕೊಟ್ಟಿದ್ದೇವೆಂದರೆ ಇದಕ್ಕೆ ಇನ್ನೂ ಜಾಸ್ತಿ ಬರಬೇಕು ಅಥವಾ ಇದರೊಳಗೇ ಕೊಟ್ಟಿದ್ದೇವೆಂದರೆ ನಿಮ್ಮ ಯೋಜನಾ ಗಾತ್ರದಲ್ಲಿ ಕಡಿಮೆಯಾಗಬೇಕು. ಅಂದರೆ, 17 ಸಾವಿರ ಕೋಟಿ ಹೋಗಿ 16 ಸಾವಿರ ಕೋಟಿ ಆಗುತ್ತದೆ. ಇದನ್ನು ಬಿಟ್ಟು ಬೇರೆ ಹಣವೇ ಇಲ್ಲವಲ್ಲಾ? ನಿಮ್ಮಲ್ಲಿರುವ ಹಣವನ್ನು ಹಂಚಿ ನಮಗಿಲ್ಲಿ Print ಮಾಡಿ ಮಾಹಿತಿ ಕೊಟ್ಟಿದ್ದೀರಿ.

ಇದು ಕೊಟ್ಟ ಮೇಲೆ ಎಲ್ಲಿಂದ ಹಣ ಬರುತ್ತದೆ? ನಾನು ಹೆಚ್ಚಿನ ಹಣ ಕೊಟ್ಟಿದ್ದೇನೆಂದು ಹೇಳುತ್ತಿದ್ದೀರಿ. ಆದ್ದರಿಂದ, ತಾವು ಹೆಚ್ಚಿನ ಹಣ ಕೊಟ್ಟಿದ್ದರೆ ಆ ಹಣ ಎಲ್ಲಿದೆ, ದಯವಿಟ್ಟು ತೋರಿಸಿ, ಆನಂತರ ನಾವು ನೋಡಿ ಮತ್ತೆ ಹೇಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಮಲ್ಲಿಕಾರ್ಜುನ ಖರ್ಗೆ ಮತ್ತು ಮಾನ್ಯ ಸಿದ್ದರಾಮಯ್ಯ ಹಾಗೂ ಮಾನ್ಯ ಧರ್ಮಸಿಂಗ್‌ರವರಲ್ಲಿ ನಾನು ಹೇಳುವುದೇನೆಂದರೆ, ಒಂದು ಪ್ರಶ್ನೆಯನ್ನು ತಾವುಗಳು ನಿಮ್ಮ ಮನಸ್ಸಿಗೆ ಹಾಕಿಕೊಳ್ಳಬೇಕು. ಡಾ: ನಂಜುಂಡಪ್ಪ ವರದಿಯ ಬಗ್ಗೆ ಚಿಂತನೆ ಮಾಡದೇ ನೀವು ಕೈಕೊಟ್ಟು ಕುಳಿತುಕೊಂಡಿದ್ದೀರಿ. ಈ ಸಮ್ಮಿಶ್ರ ಸರ್ಕಾರ ಬಂದ ಮೇಲೆ ಆ ಬಗ್ಗೆ ಗಮನಕ್ಕೆ ತೆಗೆದುಕೊಂಡು 1571 ಕೋಟಿ ರೂಪಾಯಿಗಳನ್ನು ಪ್ಲಾನ್‌ನಲ್ಲಿ ತೆಗೆದಿಟ್ಟು, ಇದಕ್ಕೆ ವಿಶೇಷವಾದಂತಹ ಕಾರ್ಯಕ್ರಮವನ್ನು ನಾವು ರೂಪಿಸಿದ್ದೇವೆ. ಡಾ: ನಂಜುಂಡಪ್ಪನವರು ವರದಿಯನ್ನು ಕೊಡುವಂಥ ಕಾಲದಲ್ಲಿ ಪ್ಲಾನ್‌ನಲ್ಲಿ ಹಣ ಕೊಡಬೇಡಿ ಎಂದು ಎಲ್ಲಿಯೂ ಸಹ ಹೇಳಿಲ್ಲ.

ಶ್ರೀ ಸಿದ್ದರಾಮಯ್ಯ:- It is very very clear. ಡಾ:ನಂಜುಂಡಪ್ಪನವರು 2002-03ರಲ್ಲಿ ವರದಿ ಕೊಟ್ಟ ಪ್ರಕಾರ 2002-03 ರಿಂದ 2009-10ರವರೆಗೆ ಆಗಿನ ರೇಟ್ಸ್ ಪ್ರಕಾರ 31,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. 31 ಸಾವಿರ ಕೋಟಿ ರೂಪಾಯಿಯೊಳಗೆ 15 ಸಾವಿರ ಕೋಟಿ Normal Developmental Expenditure ನಲ್ಲಿ ಬರುತ್ತದೆ. Regular Developmental Expenditure ಬಿಟ್ಟು ಉಳಿದ 16 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಅವರು ಶಿಫಾರಸ್ಸು ಮಾಡಿದ್ದಾರೆ. ಅವರ ಪ್ರಕಾರ 31 ಸಾವಿರ ಕೋಟಿ ರೂಪಾಯಿಗಳಲ್ಲಿ 15 ಸಾವಿರ ಕೋಟಿ ರೂಪಾಯಿ ಮೈನಸ್ ಆದರೆ ಉಳಿದ 16 ಸಾವಿರ ಕೋಟಿ ರೂಪಾಯಿಗಳಲ್ಲಿ ಪ್ರತಿ ವರ್ಷ 2000 ಕೋಟಿ ರೂಪಾಯಿ in addition to the regular developmental expenditure, ಅದಕ್ಕೆ ಖರ್ಚು ಮಾಡಬೇಕೆಂದು ಹೇಳಿದ್ದಾರೆ. ಆದರೆ, ಮಾನ್ಯ ಯಡಿಯೂರಪ್ಪನವರು ಇಲ್ಲಿ ಬಹಳ ಬುದ್ಧಿವಂತಿಕೆ ಉಪಯೋಗ ಮಾಡಿದ್ದಾರೆ. ಈ ಬುದ್ಧಿವಂತಿಕೆಯನ್ನು ಅಧಿಕಾರಿಗಳು ಮಾಡಿದರೋ ಅಥವಾ ಇವರೇ ಮಾಡಿದರೋ ಗೊತ್ತಿಲ್ಲ. ಆದರೆ, ಇವರ ಬುದ್ಧಿವಂತಿಕೆ ಇರಬೇಕೆಂದು ನನಗೆ ಅನಿಸುತ್ತದೆ.. ಈಗ ಅಲ್ಲಿ ಕುಳಿತುಕೊಂಡು ಆ ಕಡೆ ಇದ್ದಂಥವರು

ಅಧಿಕಾರದಲ್ಲಿದ್ದಾಗ ಮಾಡಲಿಲ್ಲವೆಂದು ಹೇಳುತ್ತಿದ್ದಾರೆ. ಅದು ನಿಜ, ನಾನು ಒಪ್ಪಿಕೊಳ್ಳುತ್ತೇನೆ. ಪ್ರತ್ಯೇಕವಾಗಿ 2000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು ಆದರೆ ಮಾಡಲಿಲ್ಲ. ಅದನ್ನು ನಾವು ಆಡ್ಮಿಟ್ ಮಾಡಿಕೊಳ್ಳುತ್ತೇವೆ. ಆದರೆ, ಕೆಲವು ಸಣ್ಣಪುಟ್ಟ ಕೆಲಸಗಳು ಆಗಿವೆ. ಅವೆಲ್ಲ ಬಹಳ ದೊಡ್ಡದೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು:- ನೀವೇಕೆ ಅಡ್ಮಿಟ್ ಮಾಡಿಕೊಳ್ಳುತ್ತೀರಿ? ಈಗ ತಾವು ಆ ಕಡೆಗೆ ಹೋಗಿದ್ದೀರಿ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಧರ್ಮಸಿಂಗ್‌ರವರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ನಾನು ಹಣಕಾಸಿನ ಮಂತ್ರಿಯಾಗಿ ಒಂದು ವರ್ಷ ಕೆಲಸ ಮಾಡಿದ್ದೇನೆ. ಹಾಗಾದರೆ ನಾನು ಅಡ್ಮಿಟ್ ಮಾಡಿಕೊಳ್ಳುವುದು ಬೇಡವೇ? Should I not admit it?

ಅಧ್ಯಕ್ಷರು:- 2002 ರಿಂದ ಆಗಿರುವ ಬಗ್ಗೆ ಅವರು ಹೇಳುತ್ತಿದ್ದಾರೆ. ಆದ್ದರಿಂದ ಅವರು ಇದನ್ನು ಆಡ್ಮಿಟ್ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ:- ಆ ರೀತಿಯಲ್ಲ, ನಾವೂ ಕೂಡ ಜವಾಬ್ದಾರಿ ತೆಗೆದುಕೊಳ್ಳಬೇಕಲ್ಲವೇ? ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ನಾನು ಹಣಕಾಸಿನ ಸಚಿವನಾಗಿದ್ದೆ.

ಅಧ್ಯಕ್ಷರು:- ಆಯಿತು, ಒಂದು ವರ್ಷ ಅವಧಿ ಮಾತ್ರ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ:- ಆಗ ಪ್ರತ್ಯೇಕವಾಗಿ ಇಟ್ಟಿರಲಿಲ್ಲ, ಆದ್ದರಿಂದ, ನಾವು ಅಡ್ಮಿಟ್ ಮಾಡಿಕೊಳ್ಳುತ್ತೇವೆ. ಈಗ ಇವರು ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಆದರೆ, ಇವರು ಮಾಡಿರತಕ್ಕಂಥ ಕೆಲಸವನ್ನು ಎಲ್ಲರೂ ಸಹ ಮಾಡಬಹುದಾಗಿತ್ತು. 16,166 ಕೋಟಿ ರೂಪಾಯಿ ಕಳೆದ ವರ್ಷದ ಬಜೆಟ್‌ನಲ್ಲಿತ್ತು, ಅಲ್ಲಿ 1500 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆಂದು ಕಳೆದ ವರ್ಷವೇ ಹೇಳಬೇಕಾಗಿತ್ತು.

ಅಧ್ಯಕ್ಷರು:- ಅವರ ಉತ್ತರವನ್ನು ಪೂರ್ಣವಾಗಿ ಕೇಳದೆ ನಿಮ್ಮ ತೀರ್ಮಾನವನ್ನು ಹೇಗೆ ಹೇಳುತ್ತೀರಿ? ಮೊದಲು ಅವರು ಹೇಳುವುದನ್ನು ಪೂರ್ತಿಯಾಗಿ ಕೇಳಿ. ಆನಂತರ ತಾವು ಹೇಳುವಿರಂತೆ.

ಶ್ರೀ ಸಿದ್ದರಾಮಯ್ಯ:- ಅವರಿಗೆ Patience ಇದೆ. ಆದರೆ, ನಿಮಗೆ Patience ಹೊರಟು ಹೋಗಿದೆ.

ಅಧ್ಯಕ್ಷರು: ನಾನು ಹೇಳುವುದನ್ನು ದಯವಿಟ್ಟು ಕೇಳಿ. ಅವರು ಪೂರ್ಣವಾಗಿ ಉತ್ತರ ಕೊಡಲಿ. ಆನಂತರ ಯಾವ್ಯಾವುದಕ್ಕೆ ಏನೇನು ಮಾಡಿದ್ದಾರೆಂಬುದರ ಬಗ್ಗೆ ನೀವು ಕ್ಲಾರಿಫಿಕೇಶನ್ ಕೇಳಿದರೆ ಪೂರ್ಣವಾಗಿ ಅರ್ಥವಾಗುತ್ತದೆ.

ಶ್ರೀ ಸಿದ್ದರಾಮಯ್ಯ: ಅವರು ಯೀಲ್ಡ್ ಆಗಿದ್ದಾರೆ, ನಾನು ಹೇಳುವುದನ್ನು ದಯವಿಟ್ಟು ಕೇಳಿ ಸ್ವಾಮಿ.

ಶ್ರೀ ಬಿ.ಆರ್.ಪಾಟೀಲ್:- ಬೆಂಗಳೂರಿನ ವಿಷಯ ಬಂದಾಗ 3 ದಿವಸಗಳವರೆಗೆ ಚರ್ಚೆ ಆಗುತ್ತದೆ. ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥ ವಿಷಯ ಬಂದಾಗ ತಾವು ಈ ರೀತಿ ಮಾಡಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ:- ಮಾನ್ಯ ಯಡಿಯೂರಪ್ಪನವರು ಬಜೆಟ್ ಪುಸ್ತಕವನ್ನು ಇಲ್ಲಿ ಓದಿದ್ದಾರೆ. ಇದರಲ್ಲಿ ಏನಿದೆ ಎಂದರೆ, ನೀರಾವರಿ ಮತ್ತು ಪ್ರವಾಹ ನಿಯಂತ್ರಣಕ್ಕೆ 3145 ಕೋಟಿ ರೂಪಾಯಿಗಳೆಂದು ಹೇಳಿದ್ದಾರೆ. ಈ 3145 ಕೋಟಿ ರೂಪಾಯಿ ಒಳಗಡೆಯೇ ಅವರು ನೀರಾವರಿಗೆ ತೆಗೆದಿಟ್ಟಿರುವ 300 ಕೋಟಿ ರೂಪಾಯಿ ಬರುತ್ತದೆ. ಅದು ಪ್ರತ್ಯೇಕವಲ್ಲ. ರಸ್ತೆಗಳಿಗೆ ಇಟ್ಟಿರತಕ್ಕಂಥ ದುಡ್ಡು ಕೂಡ ಅದರೊಳಗೆ ಬಂದಿದೆ. ಅವರು ಪ್ರತ್ಯೇಕವಾಗಿ action plan ತೋರಿಸಿದ್ದು, ಆ ದುಡ್ಡು ಕೂಡ ಇದರಲ್ಲಿಯೇ ಬರುತ್ತದೆ. ಸಮಾಜ ಕಲ್ಯಾಣ ಇಲಾಖೆಗೆ ಮತ್ತು ಹೌಸಿಂಗ್‌ಗೆ ಇಟ್ಟಿರತಕ್ಕಂಥ ದುಡ್ಡು ಇದರಲ್ಲಿಟ್ಟಿರತಕ್ಕಂಥದನ್ನೇ ಅಲ್ಲಿ ಸೇರಿಸಿದ್ದಾರೆ. ಆ ಕಡೆ ತೋರಿಸಿರುವುದನ್ನು ಇಲ್ಲಿ ಮೈನಸ್ ಮಾಡಿದರೆ ಇಲ್ಲಿರತಕ್ಕಂಥ all allocations are going to be changed. ಕೃಷಿ ಮತ್ತು ಸಂಬಂಧಪಟ್ಟಂಥ ಸೇವೆಗೆ 1255 ಕೋಟಿ ರೂಪಾಯಿ 7.06%, ಈ Percentage ಈ ಪ್ಲಾನ್ sizeಗೆ ಅಂದರೆ, 17782 ಕೋಟಿ ರೂಪಾಯಿಗೆ. ಅದನ್ನೇ 1571 ಕೋಟಿ ರೂಪಾಯಿಗಳನ್ನು ಈ ಪ್ಲಾನ್ ಸೈಜ್‌ನಲ್ಲಿ ಕಳೆದರೆ ಪ್ಲಾನ್ ಸೈಜ್ 16221 ಕೋಟಿ ರೂಪಾಯಿ ಬರುತ್ತದೆ. ಆಗ ಈ ಪುಸ್ತಕದಲ್ಲಿ ಕೊಟ್ಟಿರುವ ಅಲೋಕೇಷನ್ ಎಲ್ಲಾ ಬದಲಾವಣೆಯಾಗುತ್ತದೆ. ಅಂದರೆ, ಬಜೆಟ್ ಪುಸ್ತಕದಲ್ಲಿ ಹೇಳಿರುವುದೇ ಒಂದಾಗುತ್ತದೆ ಮತ್ತೆ ಇವರು ಎಲ್ಲಿ ಉತ್ತರ ಕೊಡತಕ್ಕಂಥದೇ ಒಂದಾಗುತ್ತದೆ. ಆದ್ದರಿಂದ, ಈ contradictions ಇವರು ಕೊಡುವ ಉತ್ತರದಿಂದ ನಿರ್ಮಾಣವಾಗುತ್ತಿದೆ.

ಅಧ್ಯಕ್ಷರು:- ಆಯಿತು ನೋಡೋಣ.

ಶ್ರೀ ಸಿದ್ದರಾಮಯ್ಯ:- ಆಯಿತೆಂದರೆ,...

ಅಧ್ಯಕ್ಷರು: ಅವರು ಅಂತಿಮವಾಗಿ ಏನು ಹೇಳುತ್ತಾರೆಂಬುದನ್ನು ಮೊದಲು ಕೇಳಿ. ಆಮೇಲೆ ತಾವು ಹೇಳುವಿರಂತೆ.

ಶ್ರೀ ಸಿದ್ದರಾಮಯ್ಯ: ಅಂತಿಮವಾಗಿ ಅದನ್ನೇ ಹೇಳುವುದು, ಈಗಾಗಲೇ 3 ಸಾರಿ ಕೇಳಿದ್ದೇವೆ ಇದನ್ನು ಬಿಟ್ಟು ಇನ್ನೇನು ಹೇಳುತ್ತಾರೆ?

ಅಧ್ಯಕ್ಷರು: ಮತ್ತೇನು ಹೇಳುತ್ತಾರೆಂಬುದನ್ನು ಕೇಳೋಣ.

ಶ್ರೀ ಬಿ.ಆರ್.ಪಾಟೀಲ್:- ಇದು ಹೆಚ್ಚುವರಿ ಅನುದಾನವಲ್ಲ, ಪ್ಲಾನ್ ಸೈಜ್‌ನಲ್ಲಿ ಕೊಟ್ಟಿರುವಂಥ ಹಣವೆಂದು ಮಾನ್ಯ ಎಂ.ಪಿ.ಪ್ರಕಾಶ್‌ರವರಿಗೆ ಆವತ್ತು ಹೇಳಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಂಜುಂಡಪ್ಪ ವರದಿ ಕೊಟ್ಟ ನಂತರ ಆವತ್ತಿನಂದ ಇವತ್ತಿನವರೆಗೆ ತಾವು ಏನು ಮಾಡುತ್ತಿದ್ದಾರೆಂದರೆ, ಒಟ್ಟು ಪ್ಲಾನ್ ಮತ್ತು ನಾನ್ ಪ್ಲಾನ್‌ನಲ್ಲಿ ಇಡೀ ರಾಜ್ಯದ ತಾಲ್ಲೂಕುಗಳಿಗೆ ತಮಗೆ ತಿಳಿದಂತೆ ಹಣವನ್ನು ಹಂಚಿಕೆಯನ್ನು ಮಾಡುತ್ತಿದ್ದೀರಿ. ಮಾನ್ಯ ಕುಮಾರಸ್ವಾಮಿ ಮತ್ತು ಯಡಿಯೂರಪ್ಪನವರ ಈ ಸಮ್ಮಿಶ್ರ ಸರ್ಕಾರ ಬಂದ ಮೇಲೆ ಮಾಡಿರತಕ್ಕಂಥದ್ದು ಏನೆಂದರೆ, ಪ್ಲಾನ್‌ನಲ್ಲಿರತಕ್ಕಂಥ ಎಲ್ಲಾ ಯೋಜನೆಗಳಲ್ಲಿ ಹಿಂದುಳಿದ ತಾಲ್ಲೂಕುಗಳಿಗೆ ಸೂಕ್ತ ಅನುದಾನವನ್ನು ಹಂಚಿ ಅದರ ಮೇಲೆ ಮತ್ತೆ ಹೆಚ್ಚುವರಿಯಾಗಿ ಪ್ಲಾನ್‌ನಲ್ಲಿ 1571 ಕೋಟಿ ರೂಪಾಯಿಗಳನ್ನು ಹಿಂದುಳಿದ ತಾಲ್ಲೂಕುಗಳಿಗೆ ನೀಡಿದ್ದೇವೆ. ಅಂದರೆ, ಎಲ್ಲರಿಗೂ ಸರಿ ಸಮಾನವಾಗಿ ಹಂಚುವಾಗ ಅವರ ಪಾಲನ್ನು ಇವರು ಕೊಡುತ್ತಿದ್ದ ಹಾಗೆ ಕೊಟ್ಟಿದ್ದೇವೆ. ಈ ಒಂದು ಡಾಕ್ಯುಮೆಂಟ್‌ನ್ನು ನಾನು ನಿಮ್ಮ ಮುಂದಿಟ್ಟಿದ್ದೇನೆ. 8 ವರ್ಷ ಯಾವ ರೀತಿಯಾಗಿ ಹಂಚಿದ್ದೇನೆ ಎಂಬುದನ್ನು ಇದರಲ್ಲಿ ಹೇಳಿದ್ದೇನೆ.

ಶ್ರೀ ಬಿ. ಆರ್. ಪಾಟೀಲ್:- ನೀವು ಹಂಚಿಕೆ ಮಾಡಿರತಕ್ಕಂಥದ್ದೇ ತಪ್ಪು ಎಂದು ನಮ್ಮ ವಾದವಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ನಾನು ಪೂರ್ಣವಾಗಿ ಮಾತನಾಡುವುದಕ್ಕೆ ಮಾನ್ಯ ಸದಸ್ಯರು ಬಿಡಬೇಕು.

ಅಧ್ಯಕ್ಷರು:- ಈ ರೀತಿಯಾದರೆ, ಉತ್ತರ ಕೊಡತಕ್ಕಂಥದ್ದು ಸುಮ್ಮನೆ ಎಳೆದುಕೊಂಡು ಹೋಗುತ್ತದೆ. ಇದರಿಂದ ಪ್ರಯೋಜನವಾಗುವುದಿಲ್ಲ. ಆದ್ದರಿಂದ, ಅವರು ಏನು ಹೇಳುತ್ತಾರೆಯೋ ಅದನ್ನು ಮೊದಲು ಹೇಳಿಬಿಡಲಿ. ಆಮೇಲೆ ಕ್ಲಾರಿಫಿಕೇಶನ್ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ನಾನು ಎರಡು ವಿಷಯಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಆ ಭಾಗದ ಜನರಿಗೆ ಇಷ್ಟು ಒಳ್ಳೆಯ ಕೆಲಸವನ್ನು ಮಾಡಿದ ಮೇಲೂ ಕೂಡ ಆ ಮೆಸೇಜ್ ಅಲ್ಲಿಗೆ ತಲುಪಬಾರದೆಂದು ಇವರಿಗೆ ಏನಾದರೂ ಚಿಂತನೆ ಇದ್ದರೆ ನಾನು ಅದಕ್ಕೆ ನಾನು ಏನು ಮಾಡುವುದಕ್ಕೆ ಬರುವುದಿಲ್ಲ. ಯಾರಿಗೆ ಏನು ಸುದ್ದಿ ಹೋಗಬೇಕೋ ಅವರಿಗೆ ಈಗಾಗಲೇ ಸುದ್ದಿ ತಲುಪಿದೆ.

ಶ್ರೀ ಎನ್. ಧರ್ಮಸಿಂಗ್:- ಗುಲ್ಬರ್ಗಾಕ್ಕೆ ಅವರು ಹೋಗಿ ಸಭೆ ಮಾಡಿದಾಗ ಇನ್ನು ಹೆಚ್ಚುವರಿಯಾಗಿ 32 ಸಾವಿರ ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಸಿದ್ದರಾಮಯ್ಯನವರು ಈಗಾಗಲೇ ಹೇಳಿದ ಹಾಗೆ ಇವರು ದುಡ್ಡು ಇಟ್ಟಿಲ್ಲ. ನಂಜುಂಡಪ್ಪ ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆಂಧು ಬೆಳಗಾಂ ಅಧಿವೇಶನದಲ್ಲಿ ಘೋಷಣೆ ಮಾಡಿದ್ದೀರಿ. ಗಡಿ ಪ್ರದೇಶ ಮತ್ತು ಉತ್ತರ ಕರ್ನಾಟಕಕ್ಕೆ ಕೊಡುತ್ತಾರೆಂದು ನಾವು ಕಾಯುತ್ತಿದ್ದೇವೆ. ಆದರೆ, ಇದುವರೆಗೆ ಯಾವುದನ್ನೂ ಸಹ ಕೊಟ್ಟಿಲ್ಲ. ಇಲಾಖೆಯಲ್ಲಿ ಇರತಕ್ಕಂಥ ಹಣವನ್ನು ಕಟ್ ಮಾಡಿ ಕೊಡುತ್ತಿದ್ದೀರಿ. ಹೆಚ್ಚುವರಿಯಾಗಿ ಕೊಡುತ್ತಿಲ್ಲ. ಹೆಚ್ಚುವರಿಯಾಗಿ ಎಲ್ಲಿ ಕೊಟ್ಟಿದ್ದೀರಿ ಹೇಳಿ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಯಡಿಯೂರಪ್ಪ ತನ್ನ ಜೇಬಿನಿಂದ ತಂದು ಹೆಚ್ಚುವರಿಯಾಗಿ ಕೊಡಬೇಕೆಂದು ನಿರೀಕ್ಷೆ ಮಾಡುತ್ತಿದ್ದಾರಾ? ನಾನು ಹೇಳುವುದನ್ನು ತಾವು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಅಥವಾ ಗೊತ್ತಿದ್ದರೂ ಗೊತ್ತಿಲ್ಲದ ಹಾಗೆ ವರ್ತನೆ ಮಾಡುತ್ತಿದ್ದೀರಾ? ಅವರಿಗೆ ಎಲ್ಲಾ ಗೊತ್ತಿದೆ. ಈ ರಾಜ್ಯವನ್ನು ಆಳಿದಂಥವರು ಮತ್ತು ಇಷ್ಟು ವರ್ಷ ಅನುಭವ ಇರತಕ್ಕಂಥವರು ಹಾಗು ಇಷ್ಟು ವರ್ಷಗಳ ಕಾಲ ಹಣಕಾಸಿನ ಸಚಿವರಾಗಿ ಕೆಲಸ ಮಾಡಿರುವವರಿಗೆ ವಾಸ್ತವ್ಯ ಸ್ಥಿತಿ ಗೊತ್ತಿಲ್ಲವೇ? ನಾನು ನಮಗೆ ಕೇಳುವುದೇನೆಂದರೆ, ನಂಜುಂಡಪ್ಪ ವರದಿಯಲ್ಲಿ ಪ್ಲಾನ್‌ನಿಂದ ಹಣವನ್ನು ತೆಗೆದುಕೊಡಬಾರದೆಂದು ಎಲ್ಲಿಯಾದರೂ ವರದಿಯಲ್ಲಿ ಹೇಳಿದ್ದಾರೆಯೇ? ಆ ರೀತಿ ಅವರು ಹೇಳಿಲ್ಲ.

ನಾನು ನಿಮಗೆ ಹೇಳುವುದೇನೆಂದರೆ, ಉದಾಹರಣೆಗೆ ಪ್ಲಾನ್‌ನಲ್ಲಿ 1771 ಕೋಟಿ....

ಶ್ರೀ ಸಿದ್ದರಾಮಯ್ಯ:- what is the plan size for the current financial year?

ಶ್ರೀ ಬಿ.ಎಸ್. ಯಡಿಯೂರಪ್ಪ:- ನಂಜುಂಡಪ್ಪನವರ ವರದಿಯಂತೆ ಪ್ಲಾನ್‌ನಲ್ಲಿ ಕೊಟ್ಟರೆ ಅದು ಪ್ಲಾನ್ ಸೈಜ್‌ಗೆ ಸೇರುವುದಿಲ್ಲವೇ? ಅನಾವಶ್ಯಕವಾಗಿ ತಾವು ಈ ರೀತಿ ತರ್ಕವಾಗಿ ಮಾತನಾಡತಕ್ಕಂಥದ್ದು ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು:- ಆಮೇಲೆ ನೀವು ಕ್ಲಾರಿಫಿಕೇಶನ್ ಕೇಳಿ.

ಶ್ರೀ ಸಿದ್ದರಾಮಯ್ಯ:- ಅದು ತರ್ಕ ಏಕೆ ಆಗುತ್ತದೆ?

ಶ್ರೀ ಸಿದ್ಧರಾಮಯ್ಯ: ಇದು ನಿಜವಾಗಲೂ ವಾದ, ತರ್ಕ ಏಕೆ ಆಗುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 17788 ಕೋಟಿ ರೂ.ಗಳ ಒಟ್ಟು ಯೋಜನೆಯ ಗಾತ್ರದಲ್ಲಿ ಹಿಂದುಳಿದ ತಾಲ್ಲೂಕುಗಳು ಅದರಲ್ಲಿ ಸೇರಿದೆ, ಅದನ್ನು ನಾನು ಮುಚ್ಚಿಡುತ್ತಿಲ್ಲ. ಸರ್, separate ಎಂದು ಎಲ್ಲಿ ಹೇಳಿದ್ದೇವೆ. ಇಲ್ಲಿ ಬಹಳ ಸ್ಪಷ್ಟವಾಗಿ ನನ್ನ ಆಯವ್ಯಯದಲ್ಲಿ ಹೇಳಿದ್ದೇವೆ ಅದರಲ್ಲಿಯೇ ತೆಗೆದು ಇಟ್ಟಿರುವಂಥದ್ದು. ನಾನು ಹತ್ತುಭಾರಿ ಆ ಭಾಗದ ಜನರಿಗೆ ಮನವರಿಕೆ ಮಾಡಿಕೊಡುವಂಥದ್ದು ಹಿಂದೆ ಅಧಿಕಾರದಲ್ಲಿ ಇದ್ದಂಥ ಜನ ಒಟ್ಟು ಪ್ಲಾನ್‌ಸೈಜ್‌ನಲ್ಲಿ ಇಡೀ ರಾಜ್ಯಕ್ಕೆ ಹಂಚುವ ಪ್ರಯತ್ನ ನಡೆದಿತ್ತು. ತಪ್ಪು ಸರಿ ಎಂದು ನಾನು ಆ Question ಮಾಡುತ್ತಿಲ್ಲ. ಆದರೆ ಈ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಮ್ಮ ಕಮಿಟ್‌ಮೆಂಟ್ ಇದ್ದುದ್ದರಿಂದ ಉತ್ತರ ಕರ್ನಾಟಕದ ಅಭಿವೃದ್ಧಿಯಾಗಬೇಕು ಎನ್ನುವ ಕಳಕಳಿ ಇದ್ದುದ್ದರಿಂದ ಇವತ್ತು ಈ ಒಂದು ಯೋಜನೆಗೆ 1751 ಕೋಟಿ ರೂ.ಗಳ ಕಾರ್ಯಕ್ರಮವನ್ನು ರೂಪಿಸಿದ್ದೇವೆ.

ಶ್ರೀ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು): ಮಾನ್ಯ ಯಡಿಯೂರಪ್ಪನವರೆ, ನಂಜುಂಡಪ್ಪ ವರದಿಯಲ್ಲಿ ಚಾಮರಾಜನಗರ, ಪಾವಗಡ, ಶಿರಾ, ಗೌರಿಬಿದನೂರು ಬರುತ್ತದೆ. ನಿಮಗೆ ಮನಸ್ಸು ಮತ್ತು ಕಳಕಳಿ ಇತ್ತು ಎಂದರೆ ಹೇಳಿ. ಸುಮ್ಮನೆ ಹಾಗೆ ಹೀಗೆ ಎಂದು round about ಮಾಡಿ ಹೇಳಬೇಡಿ. You don't have the political will.

ಶ್ರೀ ಬಿ.ಎಸ್.ಯಡಿಯೂರಪ್ಪ: ಯಾರಿಗೆ ವಿಲ್ ಇರಲಿಲ್ಲ, ಯಾರಿಗೆ ವಿಲ್ ಇದೆ, ಜನಗಳಿಗೆ ಬಹಳ ಚೆನ್ನಾಗಿ ಅರ್ಥವಾಗಿದೆ. ಸನ್ಮಾನ್ಯ ಧರ್ಮಸಿಂಗ್‌ರವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಆ ಭಾಗದಿಂದ ಪ್ರತಿನಿಧಿಸತಕ್ಕಂಥ ನೀವು ನಂಜುಂಡಪ್ಪ ವರದಿಯ ಪ್ರಕಾರ ಆ ಭಾಗಕ್ಕೆ ನನ್ನ ಕಾಲದಲ್ಲಿ 1000 ಕೋಟಿ ರೂ.ಗಳನ್ನು ತೆಗೆದಿಟ್ಟಿದ್ದೆ, ನಾನು ಪ್ರಾಶಸ್ತ್ಯ ಕೊಟ್ಟಿದ್ದೆ ಎಂದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ನೀವು ನನ್ನನ್ನು ಯಾವಾಗ ಪ್ರಶ್ನೆ ಮಾಡಬೇಕು.

ಶ್ರೀ ಸಿದ್ದು ಕಲ್ಲಪ್ಪ ಸವದಿ: ಮಾನ್ಯ ಯಡಿಯೂರಪ್ಪನವರು ಹೇಳುವ ಉತ್ತರ ಸರಿ ಇದೆ.

(ಗೊಂದಲ)

ಅಧ್ಯಕ್ಷರು: ಯಾರಿಗೂ ಕಮಿಟ್‌ಮೆಂಟ್ ಇಲ್ಲ. ಹೇಳಿ ಸ್ವಾಮಿ.

ಶ್ರೀ ಬಿ. ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಧರ್ಮಸಿಂಗ್‌ರವರು, ಸಿದ್ಧರಾಮಯ್ಯನವರು, ಖರ್ಗೆಯವರು ಹಿರಿಯರು ಇದ್ದಾರೆ. ಇಲ್ಲಿ ಏನಾದರೂ ಕೊರತೆಗಳು ಆಗಿದ್ದರೆ ಸರಿಪಡಿಸಿಕೊಳ್ಳುವುದು ಇದ್ದರೆ ಖಂಡಿತವಾಗಿ ನಿಮ್ಮ ಸಲಹೆ ತೆಗೆದುಕೊಂಡು ಸರಿಪಡಿಸಿಕೊಳ್ಳುತ್ತೇನೆ. ನಾನು ನಿಮ್ಮಲ್ಲಿ ನಿವೇದನೆ ಮಾಡಿಕೊಳ್ಳುವುದೇನೆಂದರೆ, ನಾನು ಸುತ್ತು ಬಳಸಿ ಏನೂ ಮಾಡುತ್ತಿಲ್ಲ. ನಮ್ಮ ಪ್ಲಾನ್‌ಸೈಜ್‌ನಲ್ಲಿ 17788 ಕೋಟಿ ರೂ.ಗಳು ಏನದೆ, ಅದರಲ್ಲಿಯೇ 1571 ಕೋಟಿ ರೂ.ಗಳನ್ನು ಪ್ರತ್ಯೇಕವಾಗಿ ಡಾ: ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಗೊಳಿಸುವುದಕ್ಕೆ ಸೇರಿಸಿದ್ದೇವೆ. 8 ವರ್ಷಕ್ಕೆ ನಾವು ಏನು ಮಾಡಿದ್ದೇವೆಂದು ನೀವು ಹೇಳಿದಿರಿ. 10%, 20%, 15%, 15%, 10%, 10% ಮತ್ತು 5% ಅನುಪಾತದಲ್ಲಿ ಖರ್ಚು ಮಾಡುತ್ತೇವೆ. ಎರಡನೇ ಮತ್ತು ತದನಂತರ ವರ್ಷಗಳಲ್ಲಿ ಹಂಚಿಕೆ ಮಾಡುವ ಒಟ್ಟು ಹಣದಲ್ಲಿ ಶೇಕಡಾ 5 ರಂತೆ ಬೆಲೆ ಏರಿಕೆಯನ್ನು ಪರಿಗಣಿಸಿ ವಾಸ್ತವ ಮೌಲ್ಯಕ್ಕೆ ಸರಿದೂಗಿಸುತ್ತೇವೆ. ಅಂದರೆ ಈ 5%ನ್ನು ಏರಿಕೆ ಮಾಡಿಕೊಂಡು ಹೋಗಿ ಮುಂದೆ ಬರುವಂಥ ದಿವಸಗಳಲ್ಲಿ ಈ ಯೋಜನೆ ಪೂರ್ಣವಾಗುವುದರೊಳಗಾಗಿ ನಂಜುಂಡಪ್ಪನವರ ಅಪೇಕ್ಷೆ ಏನಿತ್ತು , ಹಿಂದೆ ಏಕೆ ಹಣ ಖರ್ಚು ಆಗಲಿಲ್ಲ, ಆಗಬೇಕಾಗಿತ್ತು ಎನ್ನುವುದು ಬೇರೆ ವಿಚಾರ. ಹಿಂದೆ 31000 ಕೋಟಿ ರೂ.ಗಳನ್ನು ಪೂರ್ತಿಯಾಗಿ ಈ ಆಯವ್ಯಯದ ವಿಷಯವಾಗಿ ಅಂದಾಜು ಕಲ್ಪಿಸಿಕೊಟ್ಟಿರುತ್ತೇವೆ. ನೀವು ಕೇಳಬೇಕಾಗಿರುವ ಪ್ರಶ್ನೆ ಇಷ್ಟೆ, ನಾನು ಚರ್ಚೆ ಮಾಡಿರುತ್ತೇನೆ. ಯಡಿಯೂರಪ್ಪನವರೆ, ನೀವು ನಂಜುಂಡಪ್ಪನವರ ವರದಿಯನ್ನು implement ಮಾಡುವಂಥ ಕಾಲದಲ್ಲಿ

ಯಾವ ಅನುಪಾತದಲ್ಲಿ ನೀವು ಹಣವನ್ನು ಕೊಟ್ಟಿದ್ದೀರಾ ಎಂದು ಮಾನ್ಯ ಧರ್ಮಸಿಂಗ್‌ರವರ ಮನಸ್ಸಿನಲ್ಲಿರುವಂಥದ್ದು ಅಥವಾ ನಿಮ್ಮ ಗುಲ್ಬರ್ಗಾ ವಿಭಾಗದಲ್ಲಿರುವಂಥವರ ಮನಸ್ಸಿನಲ್ಲಿರುವಂಥದ್ದು. ನಮಗೆ ಇಲ್ಲಿ ರೇಷಿಯೋ ಪ್ರಕಾರ ಹಣವನ್ನು ಕೊಟ್ಟಾಗ ನಮಗೆ ಸ್ವಲ್ಪ ಹೆಚ್ಚು ಹಣವನ್ನು ಕೊಡಬೇಕಾಗಿತ್ತು, ನೀವು ಹಂಚುವುದರಲ್ಲಿ ಸ್ವಲ್ಪ ಕಡಿಮೆಯಾಗಿದೆ ಎನ್ನುವಂಥದ್ದು ನಮ್ಮ ಭಾಗದಲ್ಲಿರುವ ಸದಸ್ಯರು ಕೊಡುತ್ತಿರುವ ಸಲಹೆ, ಅದಕ್ಕೆ ನಾನು ಅಷ್ಟೇ ವಿನಂತಿಯನ್ನು ಮಾಡುವಂಥದ್ದು, ಈ ವರ್ಷ 1571 ಕೋಟಿ ರೂ.ಗಳಿಗೆ ಯೋಜನೆಯನ್ನು ಮಾಡಿದ ಮೇಲೆ ಗುಲ್ಬರ್ಗಾ ವಿಭಾಗಕ್ಕೆ ಏನಾದರೂ ಕೊರತೆಯಾಗಿದೆ ಎಂದರೆ ಮುಂದಿನ ದಿವಸಗಳಲ್ಲಿ ಇದನ್ನು ಪೂರ್ಣ ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ರಿಪೋರ್ಟ್‌ನಲ್ಲಿ ಏನಿದೆ, 60, 24, 16 ಎಂದು ಇದೆ. ನೀವು ಏಕೆ ಬದಲಾವಣೆ ಮಾಡಿದಿರಿ.

ಶ್ರೀ ಬಿ.ಆರ್. ಪಾಟೀಲ್: violate ಏಕೆ ಆಯಿತು?

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಂಜುಂಡಪ್ಪ ವರದಿ ಯಥಾಸ್ಥಿತಿಯಲ್ಲಿ implement ಮಾಡುತ್ತೇನೆಂದು ಹೇಳುವುದು. ಇನ್ನೊಂದು ಕಡೆ ಹೈದ್ರಾಬಾದ್-ಕರ್ನಾಟಕಕ್ಕೆ ಅನ್ಯಾಯವನ್ನು ಮಾಡಿದಿರಿ. 60 ಇರುವುದನ್ನು 50 ಮಾಡಿದಿರಿ. 30, 20 ಎಂದು ಮಾಡಿದಿರಿ. Further imbalance ಮಾಡುವುದು. ಮತ್ತೆ ನಾನು ಅದು ಮಾಡಿದ್ದೇನೆ, ಇದು ಮಾಡಿದ್ದೇನೆಂದು ಹೇಳುವುದು, ಏನಿದು?

ಶ್ರೀ ಬಿ.ಆರ್.ಪಾಟೀಲ್: ನೀವು ಒಪ್ಪಿರುವಂಥ ಸಮಿತಿಯ ಸೂತ್ರವನ್ನು ನೀವು ಏಕೆ ಉಲ್ಲಂಘನೆ ಮಾಡಿದಿರಿ. ಅದಕ್ಕೆ ತಾವು ವಿವರಣೆಯನ್ನು ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸರ್, ಇವರಿಗೆ ಏನಾಗಿದೆ. ಪೂರ್ತಿ ಯೀಲ್ಡ್ ಆಗಿ ಮಾತು ಕೇಳುವುದಕ್ಕೆ ಸಿದ್ಧವಿಲ್ಲವೆಂದರೆ ಏನು ಸರ್ ಹೀಗಾದರೆ. ಆಮೇಲೆ ನಿಮ್ಮ ಮಾತಿಗೆ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ಇಲ್ಲಿಂದ ಓಡಿ ಹೋಗುವುದಿಲ್ಲ. At least ಯಡಿಯೂರಪ್ಪ ಬಂದ ಮೇಲೆ, ಕುಮಾರಸ್ವಾಮಿಯವರು ಬಂದ ಮೇಲೆ ಈ ದಿಕ್ಕಿನಲ್ಲಿ ಚಿಂತನೆ ಮಾಡಿದ್ದಾರೆಂದು....

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಓಡಿ ಹೋಗುವುದಿಲ್ಲ. 3ನೇ ತಾರೀಖು ಅಕ್ಟೋಬರ್‌ವರೆಗೆ ನೀವು ಇದನ್ನು ನೋಡಿಕೊಂಡು ಇರುವವರು, ಓಡಿ ಹೋಗುತ್ತೀರೆಂದು ಹೇಳುತ್ತೇವಾ? ನೀವು ಎಲ್ಲಿ ಓಡಿ ಹೋಗುತ್ತೀರಿ?

ಶ್ರೀ ಬಿ. ಆರ್. ಪಾಟೀಲ್: ನಮಗೆ ನೀವು ಒಂದು convince ಮಾಡಿಕೊಡಿ. ಬೆಳಗಾಂ ಅಧಿವೇಶನದಲ್ಲಿ ಇದನ್ನು ಅನುಷ್ಠಾನಗೊಳಿಸುತ್ತೇವೆಂದು ನೀವು ಘೋಷಣೆ ಮಾಡಿದ ಮೇಲೆ ಅದನ್ನು ಸ್ವಾಗತ ಮಾಡಿ ಸಂತೋಷಪಟ್ಟಿದ್ದೇವೆ. ಅದರ ಬಗ್ಗೆ ನಾವು ನಿಮ್ಮನ್ನು ಹೊಗಳುತ್ತೇವೆ, ಅದರ ಬಗ್ಗೆ ಎರಡು ಮಾತು ಇಲ್ಲ. ಆದರೆ ಇಲ್ಲಿ ಗೊಂದಲ ಉಂಟಾಗಿರುವುದು ಏನು ಎಂದರೆ, ಪ್ಲಾನ್ ಸೈಜ್ ಒಳಗಡೆ ಮಾಡಿದ್ದೀರೋ ಇಲ್ಲವೋ ಎಂಬುದು. ನಂಜುಂಡಪ್ಪನವರು ಪ್ರತಿಯೊಂದು ಹಂತದಲ್ಲಿ additional, additional ಅಂತ ಹೇಳಿದ್ದಾರೆ. Additional ಆಗಿ ನೀವು ದುಡ್ಡು ಒಂದು ಕಡೆ ಕೊಟ್ಟಿಲ್ಲ. ಈ ಸಮಿತಿಯ ಸೂತ್ರ ಇದೆಯಲ್ಲಾ, ಅದನ್ನು ತಾವು ಪಾಲಿಸಿಲ್ಲ. ಏಕೆ ಅಲ್ಲಿ ಬದಲಾವಣೆ ಆಯಿತು. ಈ ಪ್ರಾದೇಶಿಕತೆಯ ಆಯಾಮವನ್ನು ಏಕೆ ನೀವು ಗಣನೆಗೆ ತೆಗೆದುಕೊಳ್ಳಲಿಲ್ಲ? ಇದು ಬಹಳ ಮುಖ್ಯವಾದಂಥ ಪ್ರಶ್ನೆ. ಆಮೇಲೆ ಇತ್ತೀಚೆಗೆ ಈ ಹಣಕಾಸಿನ allocation ಆಗುತ್ತಿದೆ, ಒಂದು ತಮಗೆ ಹೇಳಬೇಕಾಗಿದ್ದರೆ, ಪ್ರಾದೇಶಿಕ ಅಸಮಾನತೆಯಲ್ಲಿ ಬರೀ ಹಣಕಾಸಿನ ಸಮಸ್ಯೆ ಒಂದೇ ಅಲ್ಲ, ಅಭಿವೃದ್ಧಿ ಕಾರ್ಯಕ್ರಮಗಳು ಕೂಡ ಈ ಅತ್ಯಂತ ಹಿಂದುಳಿದ ಪ್ರದೇಶಗಳಿಗೆ ಬರಬೇಕು. ಇದರ ಬಗ್ಗೆ ಕಟ್ಟು ನಿಟ್ಟಾದ ಆದೇಶ ನಿಮ್ಮ ಇಲಾಖೆಯಲ್ಲಿ ನಿಮ್ಮ ಸರ್ಕಾರದಲ್ಲಿ ಇವತ್ತೂ ಕೂಡ ಇಲ್ಲ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನೀವು ದುಡ್ಡು ಖರ್ಚು ಮಾಡುತ್ತಿದ್ದೀರಿ, ಇದಕ್ಕೆ ಪ್ರತ್ಯೇಕವಾದಂಥ ಒಂದು head of account ಇಲ್ಲ. ಆಮೇಲೆ ಇವತ್ತಿನವರೆಗೂ ಕೂಡ ಸರ್ಕಾರದ ನಿರ್ದಿಷ್ಟವಾದ ಒಂದು ಆದೇಶವಿಲ್ಲ. Planning Department ಹತ್ತಿರ ಕುಳಿತುಬಿಟ್ಟು ಎಲ್ಲಾ ಇಲಾಖೆಯವರ ಜೊತೆಯಲ್ಲಿ ಚರ್ಚೆಯನ್ನು ಮಾಡಿ ಯಾವ್ಯಾವ ಇಲಾಖೆಯವರು ಎಲ್ಲೆಲ್ಲಿ ಏನೇನು ಖರ್ಚು ಮಾಡಬೇಕು, ಎಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು, ಇದು ಎಲ್ಲಿ ಕೂಡ ಸ್ಪಷ್ಟವಾಗಿಲ್ಲ. ನಾನು ಎ.ರವೀಂದ್ರರವರ ಹತ್ತಿರ ಹೋಗಿ ನೇರವಾಗಿ ಮಾತನಾಡಿದ್ದೇನೆ. ಯಾವುದೇ ಸ್ಪಷ್ಟತೆ ಇಲ್ಲ. ಅದಕ್ಕಾಗಿ ನಾನು ತಮ್ಮಿಂದ ಪೂರಕವಾಗಿ ಉತ್ತರವನ್ನು ಕೇಳುತ್ತಿದ್ದೇನೆ. ತಾವು ಅನುಷ್ಠಾನಗೊಳಿಸುವುದಕ್ಕೆ ಮುಂದೆ ಬಂದಿದ್ದೀರಿ, ಅದಕ್ಕೆ ಸ್ವಾಗತವನ್ನು ಮಾಡುತ್ತೇನೆ. ಆದರೆ ಪ್ರಾರಂಭದಲ್ಲಿಯೇ ಹಳಿ ತಪ್ಪುವುದು ಬೇಡ. ಆ ಕಾರಣಕ್ಕಾಗಿಯೇ ಹೈದ್ರಾಬಾದ್-ಕರ್ನಾಟಕ ಮಂಡಳಿ ಇವತ್ತು ಹಾಳಾಗಿ

ಹೋಗಿದೆ. 700 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ಆದರೆ ಮೂಲಭೂತ ಸೌಕರ್ಯಗಳಿಗಾಗಿ ದುಡ್ಡು ಖರ್ಚಾಗಲಿಲ್ಲ. ಯಾರು ಕಲ್ಯಾಣ ಮಂಟಪ ಕಟ್ಟಿದರು, ಯಾರು ಅಗೆಸಿ ಕಟ್ಟಿದರು, ದೇವಸ್ಥಾನ ಕಟ್ಟಿದರು. ಆ ಕಾರಣಕ್ಕಾಗಿ ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಯಾವ ಕಾರಣಕ್ಕಾಗಿ ಪ್ರಾರಂಭ ಮಾಡಿದ್ದೀರಿ, ಯಾವ ಉದ್ದೇಶಕ್ಕಾಗಿ ಹಣವನ್ನು ಖರ್ಚು ಮಾಡಬೇಕು? ಅದಕ್ಕೆ ನೀತಿ ನಿರೂಪಣೆ ಏನು? ಅದಕ್ಕೆ ಯೋಜನೆ ಏನು? ಅದಕ್ಕೆ ನಿಮ್ಮ ಕಾನೂನು ಏನು? ಇದಕ್ಕೆ ಆದೇಶವೇನು? ದಯಮಾಡಿ ಇದಕ್ಕೆ ಸ್ಪಷ್ಟೀಕರಣ ಕೊಟ್ಟರೆ ಇದು ಸರಿಯಾದ ದಾರಿಯಲ್ಲಿ ಹೋಗುತ್ತದೆ, ಆಗ ನಾವು ತಮ್ಮ ಉತ್ತರವನ್ನು ಒಪ್ಪುತ್ತೇವೆ.

ಶ್ರೀ ಎಸ್. ಎಸ್. ಪಾಟೀಲ್(ಮುಂಡರಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು 1571 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ನಂಜುಂಡಪ್ಪನವರು ಹೇಳಿರುವುದು, 32000 ಕೋಟಿ ರೂ.ಗಳು ಎಂದು ಹೇಳಿದ್ದಾರೆ. ನನ್ನ ಪ್ರಕಾರ ಈಗ ಅದಕ್ಕೆ 50,000 ಕೋಟಿ ರೂ.ಗಳು ಬೇಕಾಗುತ್ತದೆ. ಅವರು ಹೇಳಿದ ವೇಳೆ ಬೇರೆ, ಇವತ್ತು ನೀವು ಹೇಳುವುದು ಬೇರೆ. ಈಗ 1571 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆಂದು ಹೇಳಿಕೊಳ್ಳುತ್ತಿದ್ದೀರಿ, ಹೇಳಿಕೊಳ್ಳಿ. ನೀವು ಹಂಚುವುದನ್ನು ಎಲ್ಲಾ ತಾಲ್ಲೂಕಿಗೂ ನೀವು ಮೊದಲು ಸಮನಾಗಿ ಹಂಚುತ್ತೀರಿ, ಅದನ್ನು ಹಂಚಿ additional ಆಗಿ ಎಷ್ಟು ಹಣ ಕೊಟ್ಟಿದ್ದೀರಿ ಹೇಳಿ.

ಶ್ರೀ ಎಸ್. ಎಸ್. ಪಾಟೀಲ್: ಅದು ಅಲ್ಲಿ ಆಗಿಲ್ಲ. ನೀವು additional ಆಗಿ ಕೊಟ್ಟಿಲ್ಲ. ಇದ್ದ ಬಜೆಟ್‌ನಲ್ಲಿಯೇ ನೀವು ಏನು ಮಾಡಿದ್ದೀರೆಂದರೆ, ಅದರಲ್ಲಿಯೇ 1571 ಕೋಟಿ ರೂ.ಗಳನ್ನು ಕೊಟ್ಟಿದ್ದು ಹೇಳಿಬಿಟ್ಟಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಪ್ರಾದೇಶಿಕ ಅಸಮತೋಲನ ನಿವಾರಣೆಗೆ 8 ವರ್ಷಗಳ ವಿಶೇಷ ಕಾರ್ಯಕ್ರಮ ಎಂದು ನಾನು ಏನು ಹೇಳಿದ್ದೇನೆ, ದಯಮಾಡಿ ತಾವು ತೆಗೆದುಕೊಂಡು ನೋಡಬೇಕು. ಅದಕ್ಕೆ ಪ್ರತ್ಯೇಕವಾಗಿ ನಿಮಗೆ ಒಂದು ಅಂಕಿ ಅಂಶಗಳು ಇರುವ ಪುಸ್ತಕವನ್ನು ಒದಗಿಸಿದ್ದೇನೆ. 7–8ನೇಪೇಜ್‌ನಲ್ಲಿ ಬಹಳ ಸ್ಪಷ್ಟವಾಗಿ ಯಾವ ಯಾವ ಇಲಾಖೆಯಲ್ಲಿ ಈ ratio ಪ್ರಕಾರ ಹಿಂದುಳಿದ ಮತ್ತು ಅತಿ ಹಿಂದುಳಿದ ತಾಲ್ಲೂಕುಗಳಿಗೆ ಹಣವನ್ನು ಕೊಡುತ್ತೇವೆಂದು ಹೇಳಿದ್ದೇನೆ. Agriculture and

allied sector, Sericulture, Horticulture, Fisheries, Animal Husbandry, Rural Development, Irrigation ಪ್ರತಿಯೊಂದರ ಬಗ್ಗೆ ವಿವರವನ್ನು 8 ವರ್ಷಗಳಲ್ಲಿ ಏನು ಮಾಡಿದ್ದೇನೆಂಬ ಬಗ್ಗೆ ಕೊಟ್ಟಿದ್ದೇನೆ. ನಾನು ನಿಮಗೆ ಸ್ಪಷ್ಟ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಈ ಹಣ ಇಡೀ ರಾಜ್ಯಕ್ಕೆ ಹಂಚಿದ ನಂತರ ಹೆಚ್ಚುವರಿಯಾಗಿ ಕೊಡುತ್ತಿರುವ ಹಣ ಎನ್ನುವುದನ್ನು ಮಾರ್ಚಿ 31 ರಂದು ನಾನು ಉತ್ತರ ಕೊಡುವಂತಹ ಕಾಲಕ್ಕೆ ನಿಮಗೆ ಮನವರಿಕೆಯನ್ನು ಮಾಡುತ್ತೇನೆ. ನೀವು ಯಾವಾಗ ಈ ಪ್ರಶ್ನೆಯನ್ನೆತ್ತಬೇಕು, 1571 ಕೋಟಿ ರೂಪಾಯಿಗಳ ಬಗ್ಗೆ ಮಾನ್ಯ ಯಡಿಯೂರಪ್ಪನವರೆ, ವಿಶೇಷ ಅನುದಾನವೆಂದು ತೆಗೆದಿಟ್ಟಿದ್ದು, ಬೇರೆ ಎಲ್ಲಾ ಕೆಲಸ ಕಾರ್ಯಗಳು ಇಡೀ ರಾಜ್ಯದಲ್ಲಿ ನಡೆಯುತ್ತಿದ್ದು ಇದನ್ನು ಸೇರಿಸಿದ್ದೀರಾ, ಇಲ್ಲಾ, ನೀವು ಹೇಳಿದ ಪ್ರಶ್ನೆಗೆ ನಾನು ನೂರು ಬಾರಿ ಉತ್ತರವನ್ನು ಕೊಡುತ್ತಿದ್ದೇನೆ. 1571 ಕೋಟಿ ರೂಪಾಯಿಗಳು ನಾವೇನು regular allocation ಬೇರೆ ಬೇರೆ ಎಲ್ಲಾ ಇಡೀ ರಾಜ್ಯಕ್ಕೆ ಮಾಡಿದ್ದೇವೆ. ಅದು ಅಲ್ಲದೆ ಪ್ರತ್ಯೇಕವಾಗಿ 1571 ಕೋಟಿ ರೂಪಾಯಿಗಳನ್ನು ನಾನು ಕೊಟ್ಟಿದ್ದೇನೆ.

ಶ್ರೀ ಸಿದ್ದರಾಮಯ್ಯ: ಇದನ್ನು ಎಲ್ಲಿಟ್ಟಿದ್ದೀರಿ ನಮ್ಮ ಬಜೆಟ್ ಪುಸ್ತಕದಲ್ಲಿ ತೋರಿಸಿ. 1571 ಕೋಟಿ ರೂಪಾಯಿಗಳು that is inclusive of it. See, it is coming within the plan size.

ಅಧ್ಯಕ್ಷರು : ಆಯಿತು, ಸಿದ್ದರಾಮಯ್ಯನವರೆ, ಮಾನ್ಯ ಸಚಿವರು ಹೇಳಲಿ ಬಿಡಿ.

ಶ್ರೀ ಸಿದ್ದರಾಮಯ್ಯ: ಅವರು ಒಂದು ಸಾರಿ Plan Size ನ ಒಳಗಡೆ ಇದೆ ಎಂದು ಒಂದು ಸಾರಿ ಹೇಳುತ್ತಿದ್ದಾರೆ. ಇನ್ನೊಂದು ಸಾರಿ ಪ್ರತ್ಯೇಕವಾಗಿದೆ ಎಂದು ಹೇಳುತ್ತಾರೆ. ಎಲ್ಲಿದೆ ಪ್ರತ್ಯೇಕ.

ಶ್ರೀ ಬಿ.ಎಸ್.ಯಡಿಯೂರಪ್ಪ: Plan ನಲ್ಲಿ ಇದನ್ನು ತೆಗೆದಿಟ್ಟಿದ್ದೇವೆ. ಇದನ್ನು ಯಾರು ಹೇಳಿದ್ದಾರೆ ನಮಗೆ.

ಅಧ್ಯಕ್ಷರು: ಅವರು clear ಆಗಿ ಹೇಳುತ್ತಿದ್ದಾರಲ್ಲಾ it is within the plan.

ಶ್ರೀ ಸಿದ್ದರಾಮಯ್ಯ: ಡಾ॥ ನಂಜುಂಡಪ್ಪನವರು ಹೇಳಿರುವುದು, other than the regular plan ಇನ್ನೊಂದು ಸಾರಿ ತಾವು ಅದನ್ನು ಓದಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಓದಿದ್ದೇನೆ.

ಶ್ರೀ ಸಿದ್ದರಾಮಯ್ಯ: ನಾನು ಓದಿದ್ದೇನೆ.

ಅಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೆ, when he has admitted that it is within the plan, why are you arguing?

ಶ್ರೀ ಸಿದ್ದರಾಮಯ್ಯ: ಪುನಃ ಏತಕ್ಕಾಗಿ ಹೇಳಬೇಕಾಗಿತ್ತು. ನಾವು ಸೆಪರೇಟಾಗಿ ಇಟ್ಟಿದ್ದೇವೆ, ನಾವು separate ಆಗಿ 200 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ.

ಅಧ್ಯಕ್ಷರು: ಅದಕ್ಕೆ ಅವರು ಒಪ್ಪಿಕೊಂಡಿದ್ದಾರಲ್ಲಾ, ಆಯಿತು ಮುಂದೆ ಅವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಸಿದ್ದರಾಮಯ್ಯ: ಎಲ್ಲಾ ಈ ಎಲ್ಲಾ plan allocation ಒಳಗಡೆ ಇವೆಲ್ಲಾ ಬಂದಿರುತ್ತವೆ.

ಅಧ್ಯಕ್ಷರು: ಆಯಿತು, ಗುರುವೇ, ಆಯಿತು, ಅವರು within the plan ಅಂತ admit ಮಾಡಿಕೊಂಡಿದ್ದಾರೆ. ಮುಂದೆ ಏನು ಹೇಳುತ್ತಾರೆಂದು ನೋಡೋಣ.

ಶ್ರೀ ಸಿದ್ದರಾಮಯ್ಯ: ನಾನು ಈ ವರ್ಷ ಮಾಡಿಲ್ಲ, ನಂತರ ಮಾಡುತ್ತೇವೆ, ಸುಮ್ಮನೆ ಉತ್ತರ ಕರ್ನಾಟಕದವರಿಗೆ 35 ತಾಲ್ಲೂಕಿನವರಿಗೆ, 39 ತಾಲ್ಲೂಕಿನವರಿಗೆ, 40 ತಾಲ್ಲೂಕಿನವರಿಗೆ, ಮೂಗಿಗೆ ಏತಕ್ಕಾಗಿ ತುಪ್ಪವನ್ನು ಹಚ್ಚುವುದಕ್ಕೆ ಹೋಗುತ್ತೀರಿ. ನಮಗೆ political will ಇದೆ ಎಂದು ಹೇಳುವುದನ್ನು ಬಿಟ್ಟುಬಿಡಿ. ಸುಳ್ಳು ಹೇಳುವುದಕ್ಕೆ ಹೋಗಬೇಡಿ.

ಅಧ್ಯಕ್ಷರು: ಜನರು ಅಷ್ಟೇನು ದಡ್ಡರಲ್ಲಾ, ಅವರು argument ಮಾಡುತ್ತಾರೆ, ನೀವು ಹೇಳುತ್ತೀರಿ.

ಶ್ರೀ ಸಿದ್ದರಾಮಯ್ಯ: ಹಾಗಾದರೆ ನಾವು ದಡ್ಡರಾಗಿ ಬಿಡೋಣವೇ?

ಅಧ್ಯಕ್ಷರು: People will understand.. Let him complete the reply. ಏನಪ್ಪಾ ಅಂದರೆ ಹೇಳಿದ್ದೆಲ್ಲಾ ನಿಂತುಕೊಂಡು ಬಿಡುತ್ತಾರೆಯೇ?

ಶ್ರೀ ಸಿದ್ದರಾಮಯ್ಯ: ಇವರು ದಡ್ಡರಲ್ಲಾ ಅಂದರೆ ನಾವು ಕೇಳಿಕೊಂಡು ಕುಳಿತುಕೊಳ್ಳಬೇಕೆ?

ಅಧ್ಯಕ್ಷರು : ತಾವು ಕೊನೆಯಲ್ಲಿ ಕೇಳಿ.

ಶ್ರೀ ಬಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ತಾವು ಕೇಳುವುದು ಹೇಗೆಂದರೆ, I can't understand.

ಶ್ರೀ ಎನ್.ಧರ್ಮಸಿಂಗ್ (ವಿರೋಧಪಕ್ಷದ ನಾಯಕರು): ಅದಕ್ಕೆ ಅವರು ಉತ್ತರ ಕೊಡುವಾಗ ಹೇಳಲಿ.

ಅಧ್ಯಕ್ಷರು: ಅವರು ಉತ್ತರವನ್ನು ಕೊಡುತ್ತಿದ್ದಾರೆ, ಇಲ್ಲಿ ನನ್ನ ಪ್ರಶ್ನೆ ಏನು, ತಾವು ಕೇಳಿ ಸ್ವಾಮಿ, ಅವರು ಹೇಳುವುದೆಲ್ಲವನ್ನು ಹೇಳಿದ್ದಾರೆ. ಆಮೇಲೆ ತಾವು clarificationನ್ನು ಕೇಳಿ. ಅದಕ್ಕೆ ಅವರು ಏನು ಉತ್ತರ ಹೇಳುತ್ತಾರೆ ನೋಡಿ. Then people will understand.

ಶ್ರೀ ಬಿ.ಆರ್.ಪಾಟೀಲ್: ಅವರು ಉತ್ತರವನ್ನು ಕೊಡಲಿ, ನಾವು ಕೇಳುತ್ತೇವೆ.

ಅಧ್ಯಕ್ಷರು: ಮಾನ್ಯ ಪಾಟೀಲ್‌ರವರೆ ತಾವು ಕುಳಿತುಕೊಳ್ಳಿ.

ಶ್ರೀ ಬಿ.ಆರ್. ಪಾಟೀಲ್: ಅವರು ಉತ್ತರವನ್ನು ಕೊಡುವುದಕ್ಕಿಂತ ಮುಂಚೆ ಈ ವರ್ಷ 125 ಕೋಟಿ ರೂಪಾಯಿಗಳ್ನು ಬಿಡುಗಡೆ ಮಾಡಿದ್ದಾರೆ.

ಅಧ್ಯಕ್ಷರು: ಮಾನ್ಯ ಪಾಟೀಲ್‌ರವರೆ ತಾವು ಕುಳಿತುಕೊಳ್ಳಿ. ನಾನು ಈಗಾಗಲೇ 2 ಗಂಟೆಯೊಳಗಡೆ ಉತ್ತರವನ್ನು ಮುಗಿಸಬೇಕು. ನಾನು ಇದನ್ನೇ continue ಮಾಡಿಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಬಿ.ಆರ್.ಪಾಟೀಲ್: ನಾನು ಮಾನ್ಯ ಯಡಿಯೂರಪ್ಪನವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಅವರು ಏನು ಹೇಳುತ್ತಾರೆ, ಆಮೇಲೆ clarification ಕೇಳಿ. ನಾನು ಮಾನ್ಯ ಸಿದ್ದರಾಮಯ್ಯನವರಿಗೆ ಹೇಳಿದ್ದೇನೆ.

ಶ್ರೀ ಬಿ.ಆರ್.ಪಾಟೀಲ್: ನಾನು ಮಾನ್ಯ ಯಡಿಯೂರಪ್ಪನವರಿಗೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಎನ್.ಧರ್ಮಸಿಂಗ್: ಈಗ ಉತ್ತರ ಕರ್ನಾಟಕ ಭಾಗಕ್ಕೆ ಡಾ॥ ನಂಜುಂಡಪ್ಪನವರ ವರದಿ ಕೇವಲ ಬೀದರ್, ಗುಲ್ಬಗಾಕ್ಕೆ ಅಲ್ಲ, ಇಡೀ ರಾಜ್ಯದೆಲ್ಲಾ ಕಡೆಗಳಿಗೆ ಅಂದರೆ ಹಿಂದುಳಿದ ಪ್ರದೇಶಗಳಿಗೆ ಸಂಬಂಧಪಟ್ಟ ಹಾಗೆ ವರದಿಯನ್ನು ಕೊಟ್ಟಿದ್ದಾರೆ. Reportನಲ್ಲಿ ಎಷ್ಟೆಷ್ಟು additionality ನೀವು ಏನು ಬಜೆಟ್‌ನಲ್ಲಿ ಎಷ್ಟು ಹಣವನ್ನು ಇಡುತ್ತೀರಿ, ಅದಕ್ಕೆ ಅತಿರಿಕ್ತವಾಗಿ ಹಣವನ್ನು ಇಡಬೇಕಾಗುತ್ತದೆಂದು ಹೇಳಿದ್ದಾರೆ. ಇವತ್ತು ಬೆಳಗಾಂ ಸೆಷನ್‌ನಲ್ಲಿ ಹೇಳಿದರು, ಉತ್ತರ ಕರ್ನಾಟಕದಲ್ಲಿ ನಾವು ಸೆಷನ್ ಕರೆದಿದ್ದೇವೆ. ಆ ಭಾಗದ ಉನ್ನತಿಗೆ ಅನುಷ್ಠಾನಕ್ಕೆ ತರುತ್ತೇವೆ, ಅದಕ್ಕಾಗಿ ಹಣವನ್ನು ಬಿಡುಗಡೆ ಮಾಡುತ್ತೇವೆ. ಮೊನ್ನೆಯೂ ಕೂಡ ಬಜೆಟ್‌ನಲ್ಲಿ ಇಷ್ಟು ಹಣವನ್ನು ಇಡುತ್ತೇವೆಂದು ಹೇಳಿದರು. ಇವತ್ತು ಮಾನ್ಯ ಯಡಿಯೂರಪ್ಪ ಹಾಗೂ ಮಾನ್ಯ ಕುಮಾರಸ್ವಾಮಿಯವರ ಸರ್ಕಾರ ಏನು ಇದೆ, ಅದು ಇಬ್ಬರ ಸರ್ಕಾರ, ಬಿಜೆಪಿ ಜನತಾದಳದ ಸರ್ಕಾರವಲ್ಲ, ಅದಕ್ಕೆ ಅಧಿಕಾರ ಹಸ್ತಾಂತರ ಎಂದು ಹೇಳಿರುವುದು. ನಾವು ಹೇಳುತ್ತಿದ್ದೇವೆ. ತಮಗೆ commitment ಇಲ್ಲ, ಆ ಭಾಗದ ಜನರಿಗೆ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಬೇಕೆಂದು ಒಂದು plan ಸಹ ಹಾಕಿರುವುದಿಲ್ಲ. ಅದರ ಬಗ್ಗೆ ಬದ್ಧತೆಯೂ ಇಲ್ಲ, ಇವತ್ತು ಏನೆಂದರೆ ಡಾ॥ ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಕ್ಕೆ ತರುವುದರಲ್ಲಿ ಆದರೆ ಮಾನ್ಯ ಎಸ್.ಎಂ.ಕೃಷ್ಣರವರು ರಾಜ್ಯದ ಮುಖ್ಯಮಂತ್ರಿಯಾದಾಗ ಪಶುವಿಶ್ವವಿದ್ಯಾನಿಲಯವನ್ನು ಬೀದರ್‌ನಲ್ಲಿ ಮಾಡಿದರು. ಮಹಿಳಾ ವಿಶ್ವವಿದ್ಯಾನಲಯವನ್ನು ಬಿಜಾಪುರದಲ್ಲಿ ಮಾಡಿದ್ದೇವೆ. ಹನಿ ನೀರಾವರಿ ನಿಗಮವನ್ನು ಅಲ್ಲಿ ಅನುಷ್ಠಾನಕ್ಕೆ ತಂದಿದ್ದೇವೆ. ನೀವು ಯಾವುದರ ಬಗ್ಗೆ ರೈತರಿಗೆ ಅನುಕೂಲವಿಲ್ಲ. ಆ ಒಂದು ಹಿಂದುಳಿದ ಪ್ರದೇಶಕ್ಕೆ ಅನುಕೂಲವನ್ನು ಮಾಡುತ್ತಿಲ್ಲ, ಅದಕ್ಕೆ ಬದ್ದತೆ ಇಲ್ಲ, ಬಜೆಟ್‌ನಲ್ಲಿ ಯಾವ ಹಣವನ್ನು ಇಟ್ಟಿಲ್ಲ. ಗುಲ್ಬರ್ಗಾದಲ್ಲಿ ಹೇಳಿದರು, ವಿಕಾಸ ಯಾತ್ರೆಗೆ ಹೋದಾಗ 32 ಸಾವಿರ ಕೊಡುತ್ತೇವೆಂದು ಹೇಳಿದರು. ಎಲ್ಲಿ ಕೊಡುತ್ತೀರಿ, ಎಲ್ಲಿ ಮಾಡುತ್ತೀರಿ, ಯಾವಾಗ ಹಣವನ್ನು ಬಿಡುಗಡೆ ಮಾಡಿದ್ದೀರಿ, ನಿಮ್ಮ ಹಿಂದುಗಡೆ ಇರುವಂತಹ ಶಾಸಕರನ್ನು ಕೇಳಿ, ನಿಮ್ಮ ದರ್ಶನಾಪುರ್‌ರವರನ್ನು ಕೇಳಿ, ಶ್ರೀ ಅಭಯಪಾಟೀಲ್‌ರವರನ್ನು ಕೇಳಿ ಗೊತ್ತಾಗುತ್ತದೆ. ಯಾವ ಹಣ ಯಾವ ಇಲಾಖೆಯಲ್ಲಿ ಅತಿರಿಕ್ತವಾಗಿ ಇವತ್ತು ಜಿಲ್ಲಾಧಿಕಾರಿಗಳಿಗೆ ಕೊಟ್ಟಿಲ್ಲ. ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಮುಟ್ಟಿರುವುದಿಲ್ಲ. ಈ ಸರ್ಕಾರ ಡಾ:ನಂಜುಂಡಪ್ಪ ವರದಿಯನ್ನು ಅನುಷ್ಠಾನಕ್ಕೆ ತರುವುದಕ್ಕೆ ಹಿಂದೇಟು ಹಾಕುತ್ತಿದೆ. ನಮ್ಮ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಗೆ ಡಾ॥ ನಂಜುಂಡಪ್ಪನವರು ಏನು ವರದಿಯನ್ನು

ಕೊಟ್ಟಿದ್ದಾರೆ, ಅದರ ಬಗ್ಗೆ ತಾವು ಏನು ಮಾಡಿರುವುದಿಲ್ಲ. ಅದಕ್ಕೆ ನಾವೆಲ್ಲರೂ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರುಗಳು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ: ಇವರು ಅಧಿಕಾರದಲ್ಲಿದ್ದು ಏನು ಮಾಡದೆ ಇರುವರು. ಆ ಭಾಗದ ಅಭಿವೃದ್ಧಿ ಆಗುವುದನ್ನು ಹಾಳು ಮಾಡಿದವರು. ನಾಚಿಕೆ ಗೇಡು. ಆ ಭಾಗದ ಜನರಿಗೆ ನೀವು ಏನು ಮಾಡಿದ್ದೀರಿ, ನಾವು ಏನು ಮಾಡಿದ್ದೇವೆಂದು ಗೊತ್ತಿದೆ.

(ಗೊಂದಲ)

ಅಧ್ಯಕ್ಷರು: ಅವರು ವಾಕ್‌ಔಟ್ ಮಾಡಿದ್ದಾರೆ, ನೀವು ಏತಕ್ಕಾಗಿ ಕೂಗುತ್ತೀರಿ, ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಬಾಗಿಲು ತೆಗೆದು ಅವರನ್ನು ಕಳುಹಿಸಿಕೊಡಿ.

ಶ್ರೀ ಅರಗ ಜ್ಞಾನೇಂದ್ರ: ಆಧಿಕಾರ ಇದ್ದಾಗ ಏನು ಕೆಲಸ ಮಾಡದೆಯೇ oppositionನಲ್ಲಿ ಕುಳಿತುಕೊಂಡಾಗ ಸಭಾತ್ಯಾಗ ಮಾಡುವುದು ಮಹತ್‌ವಾದ ನೀವು ಬೇರೆ ಏನು ಮಾಡುವುದಿಲ್ಲ.

ಅಧ್ಯಕ್ಷರು: ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಿದ್ದಾರೆ. ಎಲ್ಲರೂ ಕುಳಿತುಕೊಳ್ಳಿ. ಆಯಿತು, ಉತ್ತರ ಕೊಡುವುದನ್ನು ಕೇಳುತ್ತೀರೋ ಅಥವಾ ಇಲ್ಲವೋ?

ಶ್ರೀ ಬಿ.ಆರ್. ಪಾಟೀಲ್: ನಾನು ರಾಜಕೀಯವನ್ನು ಬೆರೆಸುವುದಿಲ್ಲ.

ಅಧ್ಯಕ್ಷರು: ಅವರು ಉತ್ತರ ಹೇಳಿದ ಮೇಲೆ ತಾವು clarification ಕೇಳಿ.

ಶ್ರೀ ಬಿ.ಆರ್.ಪಾಟೀಲ್: ನಾನು ವಾಸ್ತವಾಂಶಗಳನ್ನು ಹೇಳಿದ ಮೇಲೆ ಅವರು ಉತ್ತರವನ್ನು ಕೊಟ್ಟರೆ ಒಳ್ಳೆಯದು. ತಮಗೂ ಕೂಡ ಮನವರಿಕೆಯಾಗುತ್ತದೆ. ಇಲ್ಲದಿದ್ದರೆ ತಪ್ಪು ಉತ್ತರಗಳಿಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು: ದಯಮಾಡಿ ತಾವು ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೆ ಹೇಳಲಿ. ಅದರಲ್ಲಿ ನಮಗೆ ಏನಾದರೂ ಅನುಮಾನಗಳು ಇದ್ದರೆ clarification ಕೇಳಿ.

ಶ್ರೀ ಬಿ.ಆರ್.ಪಾಟೀಲ್: ನಾನು ವಾಕ್‌ಔಟ್ ಮಾಡಿ ಹೋಗುವುದಿಲ್ಲ. ನಾನು ಅವರು ಹೇಳುವುದನ್ನು ಕೇಳುವುದಕ್ಕೆ ಕುಳಿತಿದ್ದೇನೆ. ನಾನು ವಾಸ್ತಾಂಶಗಳನ್ನು ಹೇಳಿದ ಮೇಲೆ ಅವರು ಉತ್ತರವನ್ನು ಕೊಟ್ಟರೆ ನನಗೂ ಕೂಡ ತೃಪ್ತಿಯಾಗುತ್ತದೆ. ಆಮೇಲೆ ಬೇಕಾದರೆ clarificationಗೆ ಹೇಳಲಿ.

ಅಧ್ಯಕ್ಷರು: ತಾವು ಉತ್ತರವನ್ನು ಹೇಳಿ. ಅವರಿಗೆ ಹೇಳಿದ್ದೇ ನಿಮಗೆ ಬೇರೆ ಹೇಳಬೇಕೆ?

ಶ್ರೀ ಬಿ.ಆರ್.ಪಾಟೀಲ್: ನಾಯಕರು ನಮ್ಮ ಮಾತನ್ನು ಕೇಳಬೇಕು. ಸದಸ್ಯರ ಮಾತು ಕೇಳಿದರೆ...

ಅಧ್ಯಕ್ಷರು: ಏನ್ರೀ ಪಾಟೀಲ್‌ರವರೆ, ನೀವು.. ಅವರು ಉತ್ತರವನ್ನು ಹೇಳಲಿ, ನಂತರ ನೀವು clarification ಕೇಳಿ ಎಂದರೆ repeated ಆಗಿ ಹೇಳಿದರೂ ಕೂಡ ಏನ್ರೀ ಸಿದ್ದರಾಮಯ್ಯನವರು ಕೇಳೀದಾಗಲೂ ಕೂಡ ನಾನು ಅದನ್ನೇ ಹೇಳಿದ್ದೇನೆ. ನಿಮಗೆ ಹೇಳಿದರೂ ಕೂಡ ನೀವು ಮತ್ತೆ ನಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಬಿ.ಆರ್. ಪಾಟೀಲ್: ನಾನು ವಾಸ್ತವಾಂಶಗಳನ್ನು ಹೇಳುತ್ತೇನೆ.

ಅಧ್ಯಕ್ಷರು: ಅವರು ಯೀಲ್ಡ್ ಆಗಿಲ್ಲ, ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಮ್ಮ ಮಲ್ಲಿಕಾರ್ಜುನ ಖರ್ಗೆ ಹಾಗೂ ಧರ್ಮಸಿಂಗ್‌ರವರು ಅವತ್ತಿನಿಂದ ಇವತ್ತಿನವರೆಗೂ ಕೂಡ ಹಿರಿಯರಾಗಿದ್ದಾರೆ. ಡಾ॥ ನಂಜುಂಡಪ್ಪನವರ ವರದಿ ಬಂದಿರುವುದು ಅವರ ಕಾಲದಲ್ಲಿ ಅವರು ಅದನ್ನ ಅನುಷ್ಠಾನಗೊಳಿಸುವುದಕ್ಕೆ ಯೋಚನೆಯನ್ನು ಕೂಡ ಮಾಡಲಿಲ್ಲ. ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದರು. ಒಂದು ರೀತಿಯಲ್ಲಿ ಆ ಭಾಗದ ಜನರಿಗೆ ಅನ್ಯಾವನ್ನು ಮಾಡಿದರು. ಇವತ್ತು ಈ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾವು ಏನು ಮಾಡಿದ್ದೇವೆಂದು ಸ್ವತಃ ಮಾಜಿ ಮುಖ್ಯಮಂತ್ರಿಗಳು ಧರ್ಮಸಿಂಗ್‌ರವರ ಕ್ಷೇತ್ರದಲ್ಲಿ ವಿಮಾನ ನಿಲ್ದಾಣದ ಅಭಿವೃದ್ಧಿಗೆ ಹಣವನ್ನು ಕೊಟ್ಟಿದ್ದೇವೆ. ವಿಮಾನ ನಿಲ್ದಾಣದ ಕೆಲಸವನ್ನು ಪ್ರಾರಂಭ ಮಾಡುತ್ತಿದ್ದೇವೆ.

ಬೀದರ್‌ನಲ್ಲಿ ಮಿಲಿಟರಿ ವಿಮಾನ ನಿಲ್ದಾಣ ಇರುವುದನ್ನು ಅಲ್ಲಿ clearence ತೆಗೆದುಕೊಂಡು civil service ಅನುಕೂಲ ಮಾಡಿಕೊಡುವುದಕ್ಕಾಗಿ Airport Development ಮಾಡುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಬಿಜಾಪುರದಲ್ಲಿ Airport Development ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಬೆಳಗಾಂನಲ್ಲಿ ಅಭಿವೃದ್ಧಿಪಡಿಸುವುದಕ್ಕೋಸ್ಕರ Green field Airport ಮಾಡುತ್ತಿದ್ದೇವೆ. ಆ ಭಾಗದಲ್ಲಿ ಬೀದರ್, ಗುಲ್ಬರ್ಗಾ, ಬಿಜಾಪುರ, ಬೆಳಗಾಂ, ಹುಬ್ಬಳ್ಳಿ ಮತ್ತು ಧಾರವಾಡ ಈ ಕಡೆ Airport ಅಭಿವೃದ್ಧಿಯ ಕಡೆಗೆ ಯೋಚನೆಯನ್ನು ಮಾಡುತ್ತಿದ್ದೇವೆ. ನಾನು ಈ ಮೊತ್ತದಲ್ಲಿ ಬೆಳಗಾವಿಯಲ್ಲಿ ವಿಧಾನ ಸೌಧವನ್ನು ಕಟ್ಟುವುದಕ್ಕೆ 250 ಕೋಟಿ ರೂಪಾಯಿಗಳನ್ನು ಈ ಬಜೆಟ್‌ನಲ್ಲಿ ತೆಗೆದಿಟ್ಟಿದ್ದೇವೆ. ನಾನು ಅದನ್ನು ಇದರಲ್ಲಿ ಸೇರಿಸಿರುವುದಿಲ್ಲ. ನಾನು ಆ ಭಾಗದ ಸದಸ್ಯರು ವಾಕ್‌ಔಟ್ ಮಾಡಿದ ಸದಸ್ಯರನ್ನು ನಾನು ಕೇಳುತ್ತೇನೆ. ಬೆಳಗಾಂನಲ್ಲಿ ವಿಧಾನಸೌಧವನ್ನು ಕಟ್ಟುವುದು ಅಭಿವೃದ್ಧಿ ಕಾರ್ಯ ತಾನೇ. ಬೆಳಗಾಂನಲ್ಲಿ ಅಧಿವೇಶನ ನಡೆಯುತ್ತಿರುವುದು ಅಭಿವೃದ್ಧಿ ಕಾರ್ಯದ ಬಗ್ಗೆ ತಾನೇ ಯೋಚನೆ ಮಾಡುತ್ತಿರುವುದು. ಅಲ್ಲಿ 250 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಸುವರ್ಣ ವಿಧಾನಸೌಧ ನಿರ್ಮಾಣ, ಬಾಗಲಕೋಟೆಯಲ್ಲಿ ತೋಟಗಾರಿಕಾ ವಿಶ್ವವಿದ್ಯಾಲಯ ಉತ್ತರ ಕರ್ನಾಟಕದ ಹೈನುಗಾರಿಕೆ ಅಭಿವೃದ್ಧಿಗೆ ಸಮಗ್ರ ಹೈನು ಅಭಿವೃದ್ಧಿ, ಗುಲ್ಬರ್ಗಾದಲ್ಲಿ ಹೈನು ವಿಜ್ಞಾನ ವಿದ್ಯಾಲಯ ಸ್ಥಾಪನೆ, ರಾಯಚೂರಿನಲ್ಲಿ ಇಂಜಿನಿಯರಿಂಗ್ ಕಾಲೇಜು, ಕುರಿ ಮತ್ತು ಉಣ್ಣೆ ಅಭಿವೃದ್ಧಿಗೆ 1–2 ಕೋಟಿ ರೂಪಾಯಿಗಳನ್ನು ಕೊಡುತ್ತಿಲ್ಲ. ಬಹಳ ಜನರಿಗೆ ಅನುಕೂಲವಾಗಲೆಂದು ಹತ್ತು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಆ ಒಂದು ಅಭಿವೃದ್ಧಿ ಮಂಡಳಿಗೆ ಕೊಡುತ್ತಿರುವುದು. ಬಾಗಲಕೋಟೆ ಪ್ಯಾಕೇಜ್ ಎಂದು ಮಾಡಿದವರು ಪ್ಯಾಕ್ ಮಾಡಿಕೊಂಡು ಹೋದರು. ಬಾಗಲಕೋಟೆಯ ಪುನರ್‌ವಸತಿಗೋಸ್ಕರ 50–00 ಕೋಟಿ ರೂ.ಗಳನ್ನು ನಾವು ಕೊಟ್ಟಿದ್ದೇವೆ. ಈಶಾನ್ಯ ಕರ್ನಾಟಕ ಮತ್ತು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆಗಾಗಿ 50+50.00 ಕೋಟಿ ರೂ.ಗಳು ಅಂದರೆ 100–00 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. ಯಾರು ಕೊಟ್ಟರು ಇಷ್ಟು ಹಣವನ್ನು? ಮಾತೆತ್ತಿದರೆ ನೀವು plan ನಲ್ಲಿ ತೆಗೆದುಕೊಟ್ಟಿದ್ದೀರಿ ಎಂದರೆ, ಹೌದು ನಂಜುಂಡಪ್ಪ ವರದಿಯಲ್ಲಿ plan ನಲ್ಲಿ ಹಣವನ್ನು ತೆಗೆದುಕೊಡಬೇಡಿ ಎಂದು ಹೇಳಿದಾರೇನು? ನಾನು ಮತ್ತೆ ಸ್ಪಷ್ಟ ಮಾಡುತ್ತೇನೆ, ಆ ಭಾಗದ ಜನರಿಗೆ ತಪ್ಪು ಗ್ರಹಿಕೆ ಆಗುವುದು ಬೇಡ ಪ್ಲಾನ್‌ನಲ್ಲಿರುವಂತಹ ಎಲ್ಲಾ ಯೋಜನೆಗಳಿಗೆ ಹಿಂದುಳಿದ ತಾಲ್ಲೂಕುಗಳಿಗೆ ಸೂಕ್ತ ಅನುದಾನವನ್ನು ಹಂಚಿ ಅದರ ಮೇಲೆ

ಹೆಚ್ಚುವರಿಯಾಗಿ 1,571–00 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. ನಮಗೆ ಬದ್ಧತೆ ಇದೆ, ಹೆಚ್ಚುವರಿಯಾಗಿ ಆ ಭಾಗದಲ್ಲಿ ನಂಜುಂಡಪ್ಪ ವರದಿ ಎಂದು ನಾವೇನು ಹಣವನ್ನು ಕೊಟ್ಟಿದ್ದೇವೆ, ಆ 1,571–00 ಕೋಟಿ ರೂ.ಗಳನ್ನು ಪೂರ್ಣವಾಗಿ ಖರ್ಚುಮಾಡುವುದಕ್ಕೆ, ನಾವೇನು ಪ್ರತ್ಯೇಕವಾಗಿ ಯಾವ್ಯಾವ ಇಲಾಖೆಗೆ ಎಷ್ಟೆಷ್ಟು ಬೇರೆ ಅನುದಾನವನ್ನು ಕೊಡುತ್ತೇವೆಂದು ಸ್ಪಷ್ಟ ಮಾಡಿದ್ದೇವೆ, ಈ ಭಾಗದ ಜನರಿಗೆ ಅದನ್ನು ಯಾವುದೇ ಕಾರಣಕ್ಕೂ ಕೊರತೆಯಾಗದ ರೀತಿಯಲ್ಲಿ ಅದನ್ನು ಅನುಷ್ಠಾನ ಗೊಳಿಸಲಿಕ್ಕೆ ನಾವು ಬದ್ಧರಿದ್ದೇವೆ. ಉತ್ತರ ಕೊಡುವುದಕ್ಕೆ ಮುಂಚೆ ನೀವು ಎಲ್ಲಿಂದ ದುಡ್ಡು ತಂದೀರಿ? plan ನಲ್ಲಿ ದುಡ್ಡು ತೆಗೆದು ಕೊಟ್ಟಿದ್ದೀರಿ ಎಂದರೆ ಹೌದು plan ನಲ್ಲಿಯೇ ಹಣವನ್ನು ತೆಗೆದುಕೊಟ್ಟಿರುವುದು. plan ನಲ್ಲಿ ತೆಗೆದುಕೊಡಬೇಕು ಇಲ್ಲವೇ Non- plan ನಲ್ಲಿ ತೆಗೆದುಕೊಡಬೇಕು. ಆದರೆ ಈ ಸಮ್ಮಿಶ್ರ ಸರ್ಕಾರ ಆ political will ಅನ್ನು ಪ್ರಕಟ ಮಾಡಿ ಪ್ರತ್ಯೇಕವಾಗಿ ಹಣವನ್ನು ಆ ಭಾಗದ ಅಭಿವೃದ್ಧಿಗೆ ನಾನು ದಾಪುಗಾಲು ಹಾಕುತ್ತಿದ್ದೇವೆ ಎಂಬುದಕ್ಕೆ ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಬಹುಶಃ ಅಭಿನಂದನೆಯನ್ನು ಸಲ್ಲಿಸಬೇಕಾಗಿತ್ತು. ಯಡಿಯೂರಪ್ಪನವರೇ ನಾವು ಯಾವುದನ್ನು ಮಾಡಲಿಕ್ಕಾಗಲಿಲ್ಲ. ಯಾವ ಭಾಗದ ಪ್ರತಿನಿಧಿಗಳಾಗಿ ಅನೇಕ ಸ್ಥಾನಮಾನಗಳನ್ನು ಹೊಂದಿದರೂ ಸಹ ನಮ್ಮ ಕೈಲಾಗದೇ ಇರುವಂಥ ಕೆಲಸ ಈ ಸಮ್ಮಿಶ್ರ ಸರ್ಕಾರ ಮಾಡಿದೆ ಎಂದು ಅಭಿನಂದನೆಯನ್ನು ಸಲ್ಲಿಸುವುದರ ಬದಲಿಗೆ ಮುಂಚೆಯೇ walk out ಮಾಡಿ ಹೋಗುವುದು ಏಕೆಂಬುದು ನನಗೇನೂ ಅರ್ಥವಾಗುತ್ತಿಲ್ಲ. ಅವರಿಗೆ ಏನು problem ಆಗಿದೆ. First time in Karnataka History ಪ್ರತಿಪಕ್ಷದ ನಾಯಕರು ಬಂದು ಬಜೆಟ್ ಕಾಫಿಯನ್ನು ಹರಿದು ಬಿಸಾಡಿದರು. ಏಕೆ? ನಾನು ಬಣಜಾರ ಸಮಾಜಕ್ಕೆ ಹಣವನ್ನು ಕೊಟ್ಟೆ, ಹಿಂದುಳಿದ ಸಮಾಜಕ್ಕೆ ಹಣವನ್ನು ಕೊಟ್ಟೆ, ಅಭಿವೃದ್ಧಿ ಕೆಲಸಗಳಿಗೆ ಹಣವನ್ನು ಕೊಟ್ಟೆ, ನಮ್ಮ vote bank ಗೆ ಕೈಹಾಕುತ್ತಿದ್ದಾರೆ. ನಾವು ಬೀದಿ ಪಾಲಾಗುತಿದ್ದೇವೆ. ಈ ಭಯದಿಂದ ಈ ರೀತಿ ಮಾತನಾಡುತ್ತಿದ್ದಾರೆಯೇ? ಮತ್ತೆ ಇನ್ನೊಂದು ಪ್ರಯತ್ನವನ್ನು ಮಾಡುತ್ತಿದ್ದೇವೆ, ನಾವು ಮುಖ್ಯಮಂತ್ರಿಗಳು ಸಹ ...

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರು ಇಲ್ಲದಾಗ ಅವರ ಸುದ್ದಿ ಏಕೆ ತಮಗೆ? ತಾವು ನಮಗೆ ಹೇಳಿ ಬೇರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಪ್ರಧಾನಿಯವರು ಬಂದಾಗ ಮೂರು ಸಾವಿರ ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ನಮಗೆ ಹಣವನ್ನು ಕೊಡಿ,

ಈ ಒಂದು ಅಸಮತೋಲನವನ್ನು ತೆಗೆದು ಹಾಕಬೇಕಾಗಿದೆ, plan ನಲ್ಲಿ ಪ್ರತಿವರ್ಷ ನಮಗೆ ಮೂರು ಸಾವಿರ ಕೋಟಿ ರೂಪಾಯಿಗಳನ್ನು ಕೊಡಿ, ನಾವು ಅಭಿವೃದ್ಧಿ ಕೆಲಸ ಕಾರ್ಯಗಳ ಕಡೆ ಗಮನ ಕೊಡುತ್ತೇವೆ ಎಂದು ನಾನು ಮುಖ್ಯಮಂತ್ರಿಗಳು ಮನವಿಯನ್ನು ಕೊಟ್ಟಿದ್ದೇವೆ. ಆದ್ದರಿಂದ ನಾವೇನು ಈ allocation ಮಾಡಿದ್ದೇವೆ. ಅದು ಸರಿಯಾಗಿದೆ, ಏನಾದರೂ ಗುಲ್ಬರ್ಗಾಕ್ಕೆ ಕೊರತೆಗಳಾಗಿವೆ ಎಂದರೆ ಮುಂದಿನ ವರ್ಷದಲ್ಲಿ ಆ ಭಾಗದಲ್ಲಿ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ಆ ಕೊರತೆಯನ್ನು ಸರಿಪಡಿಸುತ್ತೇನೆಂಬ ಭರವಸೆಯನ್ನು ಈ ಸದನದಲ್ಲಿ ನಾನು ನೀಡ ಬಯಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಸನ್ಮಾನ್ಯ ಅಧ್ಯಕ್ಷರೆ, ನಾನು ಯೋಜನಾ ಇಲಾಖೆಯ ಸಚಿವನಾಗಿ ಕೆಲವು ಕಾಲ ಹೆಚ್.ಕೆ.ಡಿ.ಬಿ. ಕೆಲಸ ಕಾರ್ಯಗಳನ್ನು ಸಹಿತ ನಾನು ನೋಡಿರತಕ್ಕಂಥವನು. ಮತ್ತೆ ನಮ್ಮ ಉಪ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಅವರ ರಾಜಕೀಯ ಭಾಷಣದ ವಿಚಾರಗಳೊಂದಿಗೆ ಇನ್ನು ಹೆಚ್ಚಿನ ಅಂಕಿ ಅಂಶಗಳನ್ನು ಕೊಡಬೇಕಾಗಿತ್ತು ಎಂದು ನಾನು ನಿರೀಕ್ಷಿಸಿದ್ದೆ. ಆದರೆ ಒಂದೆರಡು ಸ್ಪಷ್ಟನೆಗಳನ್ನು ಕೇಳಿ ಒಂದು ಸಲಹೆಯನ್ನು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ನಾನು ಕೊಡಬಯಸುತ್ತೇನೆ. ಯಡಿಯೂರಪ್ಪನವರ ಕಾಲದಲ್ಲಿ ಅಥವಾ ಇವತ್ತಿನ ಕಾಲದಲ್ಲಿ ಸ್ವಾತಂತ್ರ್ಯದ ನಂತರ ಅಥವಾ ಏಕೀಕರಣವಾದ ನಂತರ ಈ ಭಾಗಗಳೂ ಹಿಂದುಳಿದಿಲ್ಲ. for various historic reasons, ಚಾರಿತ್ರಿಕ ಕಾರಣಗಳಿಂದಾಗಿ ಮತ್ತು ಅಲ್ಲಿರತಕ್ಕಂಥ ನೈಸರ್ಗಿಕ ಕಾರಣಗಳಿಂದಾಗಿ ಪ್ರಕೃತಿಯ ಕಾರಣದಿಂದಾಗಿ ಹಿಂದುಳಿದಿರತಕ್ಕಂಥ ಕೆಲವು ಪ್ರದೇಶಗಳು. ಈ ಪ್ರದೇಶಗಳು ಕೇವಲ ಉತ್ತರ ಕರ್ನಾಟಕದಲ್ಲಿಲ್ಲ, ದಕ್ಷಿಣ ಕರ್ನಾಟಕದಲ್ಲಿ ಇದೆ ಎನ್ನುವುದನ್ನು ನಾವು ಗಮನಿಸಿದ್ದೇವೆ. ಹೌದು , ಕನಕಪುರ ಅತಿ ಹಿಂದುಳಿದಿರುವಂತ ತಾಲ್ಲೂಕು, ಈಗ ತಾವು ಪ್ರಸ್ತಾಪ ಮಾಡಿದ್ದರಿಂದ ಹೇಳುತ್ತಿದ್ದೇನೆ. ನಮ್ಮ ಕ್ಷೇತ್ರ ಯಾವಾಗಲೂ ಸಹ ಕರ್ನಾಟಕ ರಾಜಕಾರಣದಲ್ಲಿ ವಿಶೇಷವಾದ ಸ್ಥಾನವನ್ನು ಗಳಿಸಿದೆ. ಶ್ರೀ ರಾಮಕೃಷ್ಣ ಹೆಗಡೆಯವರನ್ನು ಗೆಲ್ಲಿಸಿದ್ದಂಥ ಕ್ಷೇತ್ರ ಇನ್ನು ಕೆಲವು ರಾಷ್ಟ್ರೀಯ ಮುಖಂಡರುಗಳನ್ನು ಗೆಲ್ಲಿಸಿರುವಂತಹ ಮತ್ತು ಸೋಲಿಸಿರುವಂತಹ ಕ್ಷೇತ್ರವೆನ್ನುವುದು ತಮಗೆ ಗೊತ್ತಿದೆ. ರಾಮಕೃಷ್ಣ ಹೆಗಡೆಯವರು ಕನಕಪುರಕ್ಕೆ ಮೊದಲನೇ ಸಾರಿ ಬಂದಾಗ ಏನು ಹೇಳಿದರು ಎಂದರೆ, " ಸಿಂಧ್ಯಾರವರು ಏನಿದು, ಬೆಂಗಳೂರಿನ ಅತಿ ಎತ್ತರದ ಕಟ್ಟಡದ ನೆರಳು ಕನಕಪುರದ ಮೇಲೆ ಬೀಳುತ್ತದೆ, ಹೀಗಿದೆಯಲ್ಲಾ" ಎಂದು ಇದು 25 ವರ್ಷಗಳ ಹಿಂದಿನ ಮಾತು. ಈಗ ಅದನ್ನೆಲ್ಲಾ ಹೇಳಿ

ಉಪಯೋಗವಿಲ್ಲ. ಅದರ ಬಗ್ಗೆ ಈ ಸದನದ ಹೊರಗೆ ನಾನು ಚರ್ಚೆ ಮಾಡ ಬಯಸುತ್ತೇನೆ. ಈ ಸದನದ ಸಮಯವನ್ನು ನಾನು ದುರುಪಯೋಗ ಮಾಡಿಕೊಳ್ಳಲಿಕ್ಕೆ ಬಯಸುವುದಿಲ್ಲ. ಆದರೆ ಒಂದು ಮಾತು, ಈಗ ಈ ಬಜೆಟ್‌ನಲ್ಲಿ ನಂಜುಂಡಪ್ಪ ವರದಿಯನ್ನು ಅನುಷ್ಠಾನಗೊಳಿಸಲಿಕ್ಕೆ ಸ್ವಲ್ಪ ಮಟ್ಟಿಗೆ ಪ್ರಾಮಾಣಿಕ ಪ್ರಯತ್ನ ನಡೆದಿದೆ ಎಂಬುದನನ್ನು ನಾನು ಒಪ್ಪುತ್ತೇನೆ. ಬಹುಶಃ ಯಡಿಯೂರಪ್ಪನವರಿಗೆ ಇದು ಹಿಡಿಸುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರಯತ್ನಗಳನ್ನು ಅವರು ಮಾಡಬಹುದಾಗಿತ್ತು. ಈಗ ಉದಾಹರಣೆಗೆ ನಿಮಗೆ ಹೇಳುತ್ತೇನೆ, ನಾನು ಕೈಗಾರಿಕಾ ಸಚಿವನಾಗಿದ್ದಾಗ ಕೈಗಾರಿಕಾ ವಿಕಾಸ ಎಂಬ ಕಾರ್ಯಕ್ರಮವೊಂದನ್ನು ತಂದೆವು. ಈ 39 ತಾಲ್ಲೂಕುಗಳಲ್ಲಿ ಕೈಗಾರಿಕಾ ವಿಕಾಸ ಕಾರ್ಯಕ್ರಮವನ್ನು ನಾನು ಹೋದ ದಿನವೇ ನಿಂತು ಹೋಗಿದೆ, ಇದಕ್ಕೆ ಕಾರಣವೇನು? alocations ಇತ್ತು. ಇದನ್ನು ನಾನು ಒಬ್ಬನೇ ಮಾಡಿರುವುದಲ್ಲ,

ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಆಗಿತ್ತು, ಇವತ್ತಿನ ಕ್ಯಾಬಿನೆಟ್‌ನಲ್ಲಿರುವ ಅನೇಕ ಜನ ಆವತ್ತಿನ ಕ್ಯಾಬಿನೆಟ್‌ನಲ್ಲಿದ್ದರು. ಈ ಅತಿ ಹಿಂದುಳಿದ ತಾಲ್ಲೂಕುಗಳ ಬಗ್ಗೆ ಹೇಳುತ್ತೇನೆ, ನಾನು ಬಾಕಿ ತಾಲ್ಲೂಕುಗಳ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಯಡಿಯೂರಪ್ಪನವರೇ. ಏಕೆಂದರೆ ನೀವು ರಾಮನಗರಕ್ಕೆ 450–500 ಕೋಟಿ ರೂ.ಗಳನ್ನು ಸರ್ಕಾರದ ಖಜಾನೆಯಿಂದ ನೀಡುತ್ತೀರಿ. There is a pipeline between treasury and Rmanagara, between the treasury and Holenarasipura, between the treasury and Shikaripura. ನೀವು ಸಮತೋಲನವನ್ನು ಮಾಡುತ್ತೀವೆಂದು ಹೇಳುವ ಜನ. ಹೇಗೆ ಸಮತೋಲನವನ್ನು ಮಾಡುತ್ತಿದ್ದೀರಿ? ಮರಳು ಭೂಮಿಯಲ್ಲಿ ಎರಡು ಮೂರು ಓಯಸಿಸ್‌ಗಳನ್ನು ಮಾಡುತ್ತಿದ್ದೀರಿ, ನೀವು ಮುಖ್ಯಮಂತ್ರಿಗಳಿದ್ದೀರಿ, ಹಣಕಾಸಿನ ಸಚಿವರಾಗಿದ್ದೀರಿ, ನೀವು ಏನು ಬೇಕಾದರೂ ತೆಗೆದುಕೊಳ್ಳಬಹುದು, sanction ಆಗಬಹುದು, ಈಗ ಯಾವ ಕಾನೂನಿನೊಳಗೆ ಅಧಿಕಾರಿಗಳನ್ನು bulldoze ಮಾಡಿ ಹಳ್ಳಿಗಳಿಗೆ ಕಾಂಕ್ರೀಟ್ ಹಾಕಿಸಿ, ಕಾಂಕ್ರೀಟ್‌ನೊಳಗೆ ಕಬ್ಬಿಣವನ್ನು ಸಹಿತ ಹಾಕಿಸಲಿಕ್ಕೆ ಎಲ್ಲಿ ಅವಕಾಶ ಇದೆ? ಯಾವೂರಲ್ಲಿ ಮಾಡಿದ್ದೇವೆ? ಅದನ್ನು ಮಾಡತಕ್ಕಂಥ ಕೆಲಸಗಳೆಲ್ಲಾ ನಡೆಯುತ್ತಿವೆ. ಅದರ ಬಗ್ಗೆ ಕೂಡ ನಾನು ಮಾತನಾಡಲಿಕ್ಕೆ ಹೋಗುತ್ತಿಲ್ಲ ಮಾನ್ಯ ಅಧ್ಯಕ್ಷರೆ. ಈ ಕೈಗಾರಿಕಾ ವಿಕಾಸವನ್ನು ತಾವ್ಯಾಕೆ ನಿಲ್ಲಿಸಿದ್ದೀರಿ ಎಂದು ಉತ್ತರವನ್ನು ಕೊಡಬೇಕೆಂದು ನಾನು ಕೇಳ ಬಯಸುತ್ತೇನೆ. ಕೈಗಾರಿಕಾ ವಿಕಾಸ ಡಾ॥ ನಂಜುಂಡಪ್ಪ ವರದಿಯನ್ನು ಅನುಷ್ಠಾನಗೊಳಿಸಲಿಕ್ಕೆ

ನಾವು ಮಾಡಿದಂತಹ ಒಂದು ಪ್ರಯತ್ನ ಮೊದಲನೇ ಸ್ಪಷ್ಟೀಕರಣ. ಎರಡನೆಯದು, ಈ ಬೆಳಗಾವಿ ಅಧಿವೇಶನ, ಇದು ಭಾವನಾತ್ಮಕವಾಗಿ ನಮ್ಮನ್ನು ಒಟ್ಟುಗೂಡಿಸುವಂಥ ಪ್ರಯತ್ನ ಅಷ್ಟೇ. ಅದಾಗಬೇಕು, ಅದನ್ನು ನಾನು ಸ್ವಾಗತಿಸುತ್ತೇನೆ, ಆ ಸಮಯದಲ್ಲಿ ನಾನು ವಿದೇಶದಲ್ಲಿದ್ದೆ. ಸರಿ ಮಾಡಿ, ಪ್ರತಿವರ್ಷವೂ ಬೆಳಗಾವಿಯಲ್ಲಿ ಅಧಿವೇಶನ ಮಾಡಲಿಕ್ಕೆ ಒಂದು calendar of event ಅನ್ನು announce ಮಾಡಿ, ಈಗ ಯಾವ ರೀತಿ ಮಹಾರಾಷ್ಟ್ರದಲ್ಲಿ ನಾಗ್ಪುರದಲ್ಲಿ ಇಪ್ಪತ್ತು ದಿವಸಗಳ ಕಾಲ ಅಧಿವೇಶನ ಮಾಡುತ್ತಾರೆ, ಅದೇ ರೀತಿ ಪ್ರತಿ ಸಾರಿಯೂ ಬೆಳಗಾವಿಯಲ್ಲಿಯೂ ಅಧಿವೇಶನವನ್ನು ಮಾಡಿ ಅದಕ್ಕೆ ಬೇಕಾಗಿರುವಂಥ 250-00 ಕೋಟಿ ರೂ.ಗಳ ವೆಚ್ಚದಲ್ಲಿ ವಿಧಾನಸೌಧ ಕಟ್ಟಡ ಕಟ್ಟುತ್ತಿದ್ದೀರಿ, very good, go ahead ಅದನ್ನು ನಾನು ಮೆಚ್ಚುತ್ತೇನೆ, ಆದರೆ Funds allocation ನಲ್ಲಿ ಯಾವ ರೀತಿ ಪ್ರಚಾರವನ್ನು ತಾವು ಪಡೆದಿದ್ದೀರಿ ಎಂದು ಹೇಳಿದರೆ, ನಂಜುಂಡಪ್ಪನವರು ಈ disparity ಹೋಗಬೇಕಾದರೆ 31,000-00 ಕೋಟಿ ರೂ.ಗಳನ್ನು ಬೇಕೆಂದು ಹೇಳಿದ್ದಾರೆ. ಎಂಟು ವರ್ಷದೊಳಗೆ ನಾವು implement ಮಾಡುತ್ತೇವೆಂದು ಹೇಳಿದರೆ ವರ್ಷಕ್ಕೆ 4000-00 ಕೋಟಿ ರೂ.ಗಳು ಅಂದರೆ 8x4 = 32.000 ಕೋಟಿ ರೂಪಾಯಿಗಳು ನಿಮಗೆ ಬೇಕಾಗುತ್ತದೆ. ಇವತ್ತಿನ money value. ಇದು ಪ್ರತಿ ವರ್ಷವೂ ಹೆಚ್ಚುತ್ತಾ ಹೋಗುತ್ತದೆ. Inflation ಹೋದ ಹಾಗೆ ಇದು ಸಹ ಹೆಚ್ಚುತ್ತಾ ಹೋಗುತ್ತದೆ. 32,000 ಕೋಟಿ ರೂ.ಗಳೇನು ನಿಲ್ಲುವುದಿಲ್ಲ. ತಮಗೆ ಗೊತ್ತಿರುವ ಹಾಗೆ ಯಾವುದೇ ಪ್ರಾಜೆಕ್ಟ್ ಸಹಿತ, ನಾವು ಪ್ರಾಜೆಕ್ಟ್ cost 1,000-00 ಕೋಟಿ ರೂ.ಗಳೆಂದು ಹೇಳಿದರೆ ಅದು complete ಆಗುವ ವೇಳೆಗೆ, 10,000-00 ಕೋಟಿ ರೂ.ಗಳಾಗಿರುತ್ತವೆ. ಹಾಗಾಗಿ 32,000-00 ಕೋಟಿ ರೂ.ಗಳು ಸಾಕಾಗುವುದಿಲ್ಲ. ಆದರೆ ನೀವು ಈ ವರ್ಷದ ಅಲೋಕೇಷನ್‌ನಲ್ಲಿ ಹೆಚ್ಚು ಹಣವನ್ನು ಇಡಬೇಕಾಗುತ್ತದೆ. ಈಗ ನನ್ನದೇ ಕ್ಷೇತ್ರ ಅತಿ ಹಿಂದುಳಿದಿರುವಂಥ ಕ್ಷೇತ್ರ. 2.00 ಕೋಟಿ ರೂ.ಗಳನ್ನು ರಸ್ತೆ ಅಭಿವೃದ್ಧಿಗಾಗಿ ನನ್ನ ಕ್ಷೇತ್ರಕ್ಕೆ ಈ ವರ್ಷ ಕೊಡಬೇಕಾಗಿತ್ತು. ಈಗಾಗಲೇ ನಾವು ಆಗಸ್ಟ್‌ನಲ್ಲಿದ್ದೇವೆ, ಇದುವರೆಗೂ ಒಂದು ಪೈಸೆಯೂ ಸಹಿತ ನಮಗೆ ಬಿಡುಗಡೆಯಾಗಿಲ್ಲ. ಯಾವ ಕೆಲಸ ಮಾಡುತ್ತೇವೆನ್ನುವುದು ಸಹಿತ ಗೊತ್ತಿಲ್ಲ. ಆದ್ದರಿಂದ ಖಚಿತವಾಗಿ ಏನು ಕೆಲಸಗಳಾಗಿವೆ? ತಾವು ವಿಮಾನ ನಿಲ್ದಾಣದ ಬಗ್ಗೆ ಹೇಳಿದ್ದೀರಿ. These are not new things. ಬೆಳಗಾವಿ, ಹುಬ್ಬಳ್ಳಿ ವಿಮಾನ ನಿಲ್ದಾಣ ನಾಲ್ಕು ವರ್ಷಗಳ ಹಿಂದೆ ಅಪ್ರೂವ್ ಆಗಿತ್ತು. ಕೇಂದ್ರ ಸರ್ಕಾರ ದುಡ್ಡು ಕೊಟ್ಟಿದೆ, ಕೆಲಸ ಮಾಡಿದ್ದಾರೆ. ಬಿಜಾಪುರದಲ್ಲಿ ವಿಮಾನ

ನಿಲ್ದಾಣ ಮಾಡಬೇಕೆಂಬ ಪ್ರಸ್ತಾವನೆ ಇತ್ತು. ಬಹಳ ದಿವಸಗಳಿಂದ grapes export ಮಾಡಬೇಕೆಂದಿತ್ತು. ಬೀದರ್‌ನಲ್ಲಿರತಕ್ಕಂಥ Airport Air force ನವರಿಂದ permission ಬೇಕು ಎಂದು ನಾಲ್ಕು ಪತ್ರಗಳನ್ನು ಬರೆದಿದ್ದೀರಿ, ಅದಕ್ಕೆ ಅವರಿನ್ನೂ ಒಪ್ಪಿಗೆ ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. ಯಾವ ಕಾರಣದಿಂದ ಪ್ರಧಾನ ಮಂತ್ರಿಗಳು, ಹಣಕಾಸಿನ ಮಂತ್ರಿಗಳೂ ಇನ್ನು ಬಹಳ ಬಹಳ ಮಂತ್ರಿಗಳೆಲ್ಲಾ ಬಂದು ನಿಮ್ಮನ್ನು appreciate ಮಾಡುತ್ತಾರೆ ಎನ್ನುವುದನ್ನು ಕರ್ನಾಟಕದ ಮುಂದಿನ ರಾಜಕೀಯದಲ್ಲಿ ಕಾದು ನೋಡಬೇಕಾಗಿದೆ. ಯಾವುದಕ್ಕೆ ಈ ಸಭೆಯನ್ನು ಪೀಠಿಕೆಯನ್ನಾಗಿ ಮಾಡಿದ್ದರು ಎಂಬುದನ್ನು ನಾನು ಇವತ್ತು ನಿಮಗೆ ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮನ್ನು ನೇಣು ಹಾಕಲಿಕ್ಕಾಗಿಯೇ ಈ ಸಭೆಯನ್ನು ಮಾಡಿದರೋ ಏನೋ ನನಗಂತೂ ಗೊತ್ತಿಲ್ಲ, ಅದು ಕಾಲಗರ್ಭದಲ್ಲಿ ಅಡಕವಾಗಿದೆ, ಇನ್ನು ಸ್ವಲ್ಪ ದಿವಸಗಳಲ್ಲಿ ಅದು ಸಹ ಗೊತ್ತಾಗುತ್ತದೆ, ಬಹಳ ದಿವಸಗಳವರೆಗೆ ಕಾಯಬೇಕಾಗಿಲ್ಲ. ಆದ್ದರಿಂದ ನಾನು ಕೊನೆಯದಾಗಿ ಒಂದು ಸಲಹೆಯನ್ನು ಕೊಡುತ್ತೇನೆ ಯಡಿಯೂರಪ್ಪನವರೇ. ನಮ್ಮ ಕಾಲದಲ್ಲಿ ಅದನ್ನು ಮಾಡಿಬಿಡಿ, ಏಕೆಂದರೆ ನಾನು ಮತ್ತೆ ಉಪ ಮುಖ್ಯಮಂತ್ರಿಯಾಗುವುದಿಲ್ಲ. ಹಣಕಾಸಿನ ಮಂತ್ರಿಯಾಗುವುದಿಲ್ಲವೆಂದು ಹೇಳಿಬಿಟ್ಟಿದ್ದೀರಿ, ಆದ್ದರಿಂದ ನೀವು ಸಚಿವರಾಗಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಅಕ್ಟೋಬರ್ 3ನೇ ತಾರೀಖಿನ ನಂತರ ಉಪ- ಮುಖ್ಯಮಂತ್ರಿಯಾಗಿರುವುದಿಲ್ಲ, ಮುಖ್ಯಮಂತ್ರಿಯಾಗುತ್ತೇನೆಂದು ಸ್ಪಷ್ಟವಾಗಿ ಹೇಳಿದ್ದೇನೆ. ಅದು ಮುಖ್ಯಮಂತ್ರಿಗಳು ಕೊಟ್ಟಿರುವ ಭರವಸೆ, ನಮ್ಮ ಅವರ ಒಡಂಬಡಿಕೆ, ಬಿಜೆಪಿ ಮತ್ತು ಜೆಡಿಎಸ್.ನ ಒಡಂಬಡಿಕೆ. ಇದು ಬಹಳ..

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ನೋಡಿ ಅದಕ್ಕೆ ಹೇಳುವುದು, ಯಡಿಯೂರಪ್ಪನವರೇ ನೀವು ದಾರಿ ತಪ್ಪುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದನ್ನು ನಾನು ಹೇಳುತ್ತಿಲ್ಲ. ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗುತ್ತಾರೆಂದು ಘೋಷಣೆ ಮಾಡಿರುವುದರಿಂದ ಖಂಡಿತಾ ಅಲ್ಲಿ ಕುಳಿತುಕೊಳ್ಳುತ್ತೇನೆಂದು ಹೇಳಿದ್ದೇನೆಯೇ ಹೊರತು ಬೇರೆ ಯಾವುದೇ ವೈಯಕ್ತಿಕ ದೃಷ್ಟಿಯಿಂದಲ್ಲ. ನಾನು ಸಹ ರಾಷ್ಟ್ರೀಯ ಪಕ್ಷದಿಂದ ಬಂದಂಥವನು. ಇದು ಒಪ್ಪಂದವಾಗಿರುವುದು ಕುಮಾರಸ್ವಾಮಿಯವರು ನಾವು ವೈಯಕ್ತಿಕವಾಗಿ ಮಾತನಾಡಿದ್ದೇವೆ, ನಾನೊಂದು ರಾಷ್ಟ್ರೀಯ ಪಕ್ಷವನ್ನು

ಪ್ರತಿನಿಧಿಸುತ್ತಿದ್ದೇನೆ. ನಮ್ಮ ರಾಷ್ಟ್ರೀಯ ನಾಯಕರು ನನಗೆ clearance ಕೊಟ್ಟು ನೀನು ಮುಂದಿನ ಮುಖ್ಯಮಂತ್ರಿಯಾಗಬೇಕೆಂದು ಹೇಳಿದ್ದಾರೆ. ಅದಕ್ಕಾಗಿ ನಾನು ಅಕ್ಟೋಬರ್ 4 ರಂದು ಅಲ್ಲಿ ಕುಳಿತುಕೊಳ್ಳುತ್ತೇನೆಂದು ಹೇಳಿದ್ದೇನೆಯೇ ಹೊರತು ಬೇರೆ ಅರ್ಥದಲ್ಲಿ ಅಲ್ಲ.

ಅಧ್ಯಕ್ಷರು: ರಾಜಕೀಯದ್ದು ಬೇಡ. ಏನಾದರು ಹೇಳುವುದಿದ್ದರೆ ನಂಜುಂಡಪ್ಪನವರ ವರದಿಯ ಬಗ್ಗೆ ಹೇಳಿ. ರಾಜಕೀಯಕ್ಕೆ ಹೋದರೆ ಬಹಳ ಕಾಲ ತೆಗೆದುಕೊಳ್ಳುತ್ತದೆ. ಇನ್ನೂ ಪ್ರಮುಖವಾದ ವಿಚಾರಗಳು, ಬಿಲ್ಲುಗಳೆಲ್ಲಾ ಇದೆ. ಬೇಗ ಮುಗಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಯಡಿಯೂರಪ್ಪನವರು ಬಹಳ ತಾಳ್ಮೆಯಿಂದ ತಣ್ಣೀರನ್ನು ಸಹ ಸೋಸಿ ತಣ್ಣಗೆ ಮಾಡಿಕೊಂಡು ಕಳೆದ 8–10 ತಿಂಗಳಿನಿಂದ ಕುಡಿದಿದ್ದಾರೆ. ಎಲ್ಲಾ ರೀತಿಯ ಹಿಂಸೆಯನ್ನು ಅನುಭವಿಸಿದ್ದಾರೆ. ಇವತ್ತು ಸ್ವಲ್ಪ ದಾರಿ ತಪ್ಪಿಬಿಟ್ಟರು. Agreement ಪ್ರಕಾರ ಹಣಕಾಸು ಇಲಾಖೆಯನ್ನು ನೀವು ಹೇಗೆ ಇಟ್ಟುಕೊಳ್ಳಲು ಆಗುತ್ತದೆ? ಇವತ್ತಿನಿಂದಲೇ ಮತ್ತೆ ಜಗಳ ಕಾಯಲು ತೊಂದರೆಯಾಗುತ್ತದೆ. ದಯವಿಟ್ಟು ಅದನ್ನು ವಾಪಸ್ ತೆಗೆದುಕೊಂಡುಬಿಡಿ. ಹಾಗೆಲ್ಲಾ ಮಾತನಾಡಲು ಹೋಗಬೇಡಿ. ಅವರಿಗೆ ಏನೇನು portfolios ಇದೆ, ಅವೆಲ್ಲ ಕೊಟ್ಟೇ ಕೊಡುತ್ತೇವೆ ಎಂದು ಇನ್ನೊಂದು ಸಲ ಇಲ್ಲೇ announce ಮಾಡಿ, ಇಲ್ಲದಿದ್ದರೆ ಇದೇ ನಿಮ್ಮ ಜಗಳಕ್ಕೆ ನಾಂದಿಯಾಗುತ್ತದೆ. ನಿಮಗೆ ಅಧಿಕಾರ ಸಿಗುವುದಿಲ್ಲ. ಅದೇನೆ ಇರಲಿ, ನೀವು ಆ ಕಡೆ ಹೋದರೂ ನಮಗೆ ಸಂತೋಷ. ನಮ್ಮ support ಇಲ್ಲದಿರಬಹುದು, ಆದರೂ ನಮಗೆ ಸಂತೋಷ. ಕೊನೆಯದಾಗಿ ನಾನು ಕೇಳಿಕೊಳ್ಳುವುದೇನೆಂದರೆ ಪ್ರಚಾರಕ್ಕೋಸ್ಕರ ಇದನ್ನು ಮಾಡಲು ಹೋಗಬೇಡಿ. ಹಣ ನಿಮ್ಮ ಹತ್ತಿರ ಇದೆ. ಬಿಡುಗಡೆ ಮಾಡಬೇಕು. ಕೊನೆಯದಾಗಿ, ನಾನು ಒಂದು ಸಲಹೆ ಕೊಡುವುದೇನೆಂದರೆ ನಂಜುಂಡಪ್ಪ ವರದಿ ಇದೆಯಲ್ಲ, ರಾಜ್ಯದಲ್ಲಿ ಈ ಒಂದು ವ್ಯತ್ಯಾಸವನ್ನು ತಡೆಗಟ್ಟಲು actual ಆಗಿ ತೆಗೆಯಬೇಕು ಎಂದರೆ ಇದರಲ್ಲಿ expert ಎಂದರೆ ನಮ್ಮ ಹಿರಿಯ ಸದಸ್ಯರಾಗಿರುವ ಶ್ರೀಮಾನ್ ವೈಜನಾಥ್ ಪಾಟೀಲ್‌ರವರು. Article 371ನ್ನು ಬದಲಾವಣೆ ಮಾಡಿ ಕರ್ನಾಟಕದ ಈ ಪ್ರದೇಶಗಳನ್ನು ಸೇರಿಸಬೇಕು ಎಂದು ಅವರು fight ಮಾಡಿಕೊಂಡು ಬೀದರ್‌ನಿಂದ ಬಳ್ಳಾರಿಯವರೆಗೆ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಅವರು ಇದರ ಬಗ್ಗೆ ಬೆಳಕು ಚೆಲ್ಲಬೇಕು. ಇದನ್ನು ಮಾಡುವುದಕ್ಕೆ ಬಹುಶಃ ನನಗನ್ನಿಸುತ್ತದೆ, ನಮ್ಮ ಸರ್ಕಾರ ಪ್ರಯತ್ನ ಮಾಡಿದ್ದರೆ

automatic ಆಗಿ ಬಜೆಟ್‌ನಲ್ಲೇ ಇದೆಲ್ಲಾ allocate ಆಗಿರುತ್ತಿತ್ತು. Government jobs ಕೂಡ ಸಿಗುತ್ತಿತ್ತು. ಮೆಡಿಕಲ್, ಇಂಜಿನಿಯರಿಂಗ್ ಸೀಟ್ ಸಹಾ ಸಿಗುತ್ತಿತ್ತು. ಈ 71 ತಾಲ್ಲೂಕುಗಳೇನಿದೆ, ಅದಕ್ಕೆ automatically funds ಹೋಗಿರುತ್ತಿತ್ತು. ಇದು ಆಗುತ್ತಿಲ್ಲ. ಇದರ ಕಡೆ ತಮ್ಮ ಪ್ರಯತ್ನ ಆಗಬೇಕು ಎಂಬುದು ನನ್ನ ಸಲಹೆ. ಇದನ್ನು implement ಮಾಡಬೇಕೆಂದು Planning Ministerಗೆ ಇದನ್ನು ಸೇರಿಸಿ. Planning Ministerಗೆ ಈಗ ಏನು ಹೆಚ್ಚಿನ ಕೆಲಸದ ಒತ್ತಡ ಇಲ್ಲ. ಅದಕ್ಕೋಸ್ಕರ ವಿಶೇಷವಾದ ಕಾರ್ಯದರ್ಶಿಯನ್ನು ಮಾಡಿ ಈ ರಾಜ್ಯದಲ್ಲಿ ನಂಜುಂಡಪ್ಪನವರ ವರದಿಯನ್ನು ಜಾರಿಗೊಳಿಸುವುದಕ್ಕೆ ನೇಮಕ ಮಾಡಿ ಅದರ ಜವಾಬ್ದಾರಿಯನ್ನು ಕೊಟ್ಟರೆ ಅವರು ಇನ್ನೂ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಾರೆ ಎಂದು ಸಲಹೆ ಕೊಡುತ್ತೇನೆ.

ಶ್ರೀ ಬಿ.ಆರ್.ಪಾಟೀಲ್: ಮಾನ್ಯ ಯಡಿಯೂರಪ್ಪನವರು ಇದನ್ನು ಘೋಷಣೆ ಮಾಡಿದ ಮೇಲೆ ಇವತ್ತೂ ಸ್ವಾಗತ ಮಾಡುತ್ತೇನೆ ಮತ್ತು ನಮ್ಮ ಭಾಗದ ಜನರಿಗೆ ಸಂತೋಷವಾಗಿದೆ. ಇದರಿಂದ ಪ್ರಾದೇಶಿಕ ಸಮತೋಲನೆ ಬರುವುದಕ್ಕೆ ಸಾಧ್ಯತೆ ಇದೆ. ಪ್ರಾರಂಭದಲ್ಲಿ ಕೆಲವು ನ್ಯೂನ್ಯತೆಯಾಗಿದೆ, ತಪ್ಪು ಯಾರು ಮಾಡಿದ್ದಾರೋ, ಅಧಿಕಾರಿಗಳು ಇವರಿಗೆ ತಪ್ಪು ದಾರಿಗೆ ಎಳೆದಿದ್ದಾರೋ ನನಗೆ ಗೊತ್ತಿಲ್ಲ. ನಾನು ಇವತ್ತು ವಿನಂತಿ ಮಾಡಿಕೊಳ್ಳುತ್ತೇನೆ, Positive ಆಗಿ ಇವತ್ತು ಕೂಡ ನಂಜುಂಡಪ್ಪನವರ ಸಮಿತಿಯಲ್ಲಿ ಕೆಲಸ ಮಾಡಿದಂಥ ತಜ್ಞರಿದ್ದಾರೆ. ಡಾ॥ ಅಬ್ದುಲ್ ಅಜೀಜ್‌ರವರು, ಡಾ॥ ಶೇಷಾದ್ರಿ ಯವರು ಇದ್ದಾರೆ. ಇದರ ಬಗ್ಗೆ ಅಧ್ಯಯನ ಮಾಡಿದಂಥ ಕೆಲವು ಪ್ರಾಧ್ಯಾಪಕರು ಇದ್ದಾರೆ. ಅವರಿಗೆ ರಾಜಕೀಯ ಸಂಬಂಧ ಇಲ್ಲ. ರಾಜಕಾರಣದಲ್ಲಿ ಆ ಪಕ್ಷ ಈ ಪಕ್ಷ ಎಂಬುದು ಅವರಿಗೆ ಇಲ್ಲ. ಒಟ್ಟಿನಲ್ಲಿ ರಾಜ್ಯದ ಅಭಿವೃದ್ಧಿಯ ಬಗ್ಗೆ ಚಿಂತನೆ ಮಾಡುವಂಥ ಕೆಲವು ಜನರು ಇದ್ದಾರೆ. ನಾನು ಯಡಿಯೂರಪ್ಪನವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ, ನೀವು Planning Department ರವರನ್ನು ಕೂರಿಸಿಕೊಂಡು Chief Secretaryಯನ್ನು ಕೂರಿಸಿಕೊಂಡು ಎಲ್ಲಾ ಇಲಾಖೆಯ ಕಾರ್ಯದರ್ಶಿಯವರನ್ನು ಕೂರಿಸಿಕೊಂಡು ನಿಮ್ಮ ಬಜೆಟ್ ಪ್ಲಾನ್ ಸೈಜ್ ಏನು ಮತ್ತು ನಂಜುಂಡಪ್ಪ ವರದಿ ಶಿಫಾರಸ್ಸು ಏನು, ಯಾವ್ಯಾವ ಭಾಗದಲ್ಲಿ ಎಲ್ಲೆಲ್ಲಿ ಹಿಂದುಳಿದಿರುವಿಕೆಯಾಗಿದೆ, ಎಲ್ಲೆಲ್ಲಿ ಯಾವ್ಯಾವ ಪ್ರಮಾಣದಲ್ಲಿ ಎಷ್ಟೆಷ್ಟು ದುಡ್ಡನ್ನು ಖರ್ಚು ಮಾಡಬೇಕು, ಇದರ ಬಗ್ಗೆ ಸ್ಪಷ್ಟವಾದ ಆದೇಶ ಮಾಡಿ ಇಲಾಖೆಗಳಿಗೆ ನಿರ್ದೇಶನ ಕೊಟ್ಟರೆ ದಾರಿ ತಪ್ಪುವುದು ತಪ್ಪುತ್ತದೆ ಎಂಬುದು ನಮ್ಮ ಕಳಕಳಿಯ ವಿನಂತಿ. ಅದನ್ನು ದಯಮಾಡಿ ಮಾಡಿ. ಮೊದಲನೆಯ

ಹಂತದಲ್ಲಿ ತಮಗೆ ಅಭಿನಂದನೆಯನ್ನು ಸಲ್ಲಿಸಬೇಕು. 125 ಕೋಟಿ ರೂಪಾಯಿಗಳನ್ನು ತಾವು ಈಗಾಗಲೇ ಬಿಡುಗಡೆ ಮಾಡಿದ್ದೀರಿ. ಅದರಲ್ಲಿ ನಮಗೆ ಯಾವ ರೀತಿಯಾಗಿ ಅನ್ಯಾಯವಾಗಿದೆ ಎಂಬುದರ ಬಗ್ಗೆ ಹೇಳುವುದಾದರೆ, ನಂಜುಂಡಪ್ಪ ಸಮಿತಿಯ ಸೂತ್ರ ಏನು ಹೇಳುತ್ತದೆ, 3125 ಲಕ್ಷ ರೂಪಾಯಿ, ಈ 125 ಕೋಟಿ ರೂಪಾಯಿ ನೀವು ಬಿಡುಗಡೆ ಮಾಡಿದ ಪ್ರಕಾರ 3125 ಲಕ್ಷ ರೂಪಾಯಿ ಎಂದು ಸಮಿತಿಯ ಸೂತ್ರ ಹೇಳುತ್ತದೆ. ಆದರೆ ನಿಮ್ಮ ಸರ್ಕಾರದ ಸೂತ್ರ ಎಷ್ಟು ಬಿಡುಗಡೆ ಮಾಡಿದೆ ಎಂದರೆ 3487.77. ಅಂದರೆ ಸಮಿತಿ ಶಿಫಾರಸ್ಸು ಮಾಡಿದ್ದಕ್ಕಿಂತ ಜಾಸ್ತಿ ಮುಂದುವರೆದ ಪ್ರದೇಶಕ್ಕೆ ಬೆಂಗಳೂರು ವಿಭಾಗಕ್ಕೆ ಬಿಡುಗಡೆ ಮಾಡಿದೆ. ಇದನ್ನು ಇಲ್ಲಿ ಯಾರಾದರೂ ಒಪ್ಪುತ್ತಾರೆಯೇ? ಮುಂದುಳಿದಿರುವ ಪ್ರದೇಶಕ್ಕೆ ಹೆಚ್ಚಿನ ಹಣ, ಹಿಂದುಳಿದ ಪ್ರದೇಶಕ್ಕೆ ಕಡಿಮೆ ಹಣ ಎಂದರೆ ನಮ್ಮ ಮನಸ್ಸಿಗೆ ನೋವು ಆಗುವುದಿಲ್ಲವೆ? ಅದೇ ಪ್ರಕಾರ ಮೈಸೂರು ವಿಭಾಗಕ್ಕೆ 1875 ಲಕ್ಷ ರೂಪಾಯಿ ಎಂದು ಸಮಿತಿಯ ಸೂತ್ರ ಹೇಳಿದರೆ ಸರ್ಕಾರದ ಸೂತ್ರದಂತೆ 1950.29 ಲಕ್ಷ ಬಿಡುಗಡೆ ಮಾಡುತ್ತಾರೆ. ಇಲ್ಲಿ ಜಾಸ್ತಿ ಬಿಡುಗಡೆ ಮಾಡುತ್ತೀರಿ. ಅದೇ ಪ್ರಕಾರ ಬೆಳಗಾಂ ವಿಭಾಗಕ್ಕೆ 2500 ಲಕ್ಷ ಬಿಡುಗಡೆ ಮಾಡಬೇಕೆಂದು ಸಮಿತಿ ಸೂತ್ರ ಹೇಳಿದರೆ ನೀವು 2916. 54 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೀರಿ. ಅದೇ ಪ್ರಕಾರ ಗುಲ್ಬರ್ಗಾ ವಿಭಾಗಕ್ಕೆ 5000 ಲಕ್ಷ ರೂಪಾಯಿ ಬಿಡುಗಡೆ ಮಾಡಬೇಕೆಂದು ಸಮಿತಿಯ ಸೂತ್ರ ಹೇಳಿದರೆ ನೀವು ಕೇವಲ 4147.40 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೀರಿ. ಇದು ಯಾವ ರೀತಿಯ ಲೆಕ್ಕಾಚಾರ? ನಮಗೆ ಹೊಟ್ಟೆ ಉರಿಯುತ್ತಿದೆ. ನೀವು ಏನೋ "ಪ್ರಾಮಾಣಿಕವಾಗಿ ನಂಜುಂಡಪ್ಪ ವರದಿಯನ್ನು ಅನುಷ್ಠಾನಗೊಳಿಸುತ್ತೇವೆ, ಈ ರಾಜ್ಯವನ್ನು ಸಮಾನ ದೃಷ್ಟಿಯಿಂದ ತೆಗೆದುಕೊಂಡು ಹೋಗುತ್ತೇವೆ" ಎಂದು ಘೋಷಣೆ ಮಾಡಿದಿರಿ. ನಿಜವಾಗಿಯೂ ನಮಗೆ ಖುಷಿಯಾಯಿತು. ಇವತ್ತೂ ನಾನು ನಿರೀಕ್ಷೆ ಮಾಡುತ್ತೇನೆ, ನಾನು ಆಶಾವಾದಿಯಾಗಿದ್ದೇನೆ. ನೀವು ಅದರಿಂದ ಹಿಂದೆ ಸರಿಯುತ್ತೀರಿ ಎಂದು ಅಲ್ಲ. ಆದರೆ, ಈ ನ್ಯೂನ್ಯತೆ ಏನದೆ, ಅದನ್ನು ದಯಮಾಡಿ ತಿದ್ದುಪಡಿ ಮಾಡುವುದಕ್ಕೆ ಒಂದು ಸುಸೂತ್ರವಾದ ಸರ್ಕಾರಿ ಆದೇಶ ಮತ್ತು ಸಂಬಂಧಪಟ್ಟ ಇಲಾಖೆಗಳಿಗೆ ಕಟ್ಟುನಟ್ಟಿನ ನಿರ್ದೇಶನ ಯಾರ್‍ಯಾರು ಯಾವ್ಯಾವ ಕ್ಷೇತ್ರದಲ್ಲಿ ಏನೇನು ಕೆಲಸ ಮಾಡಬೇಕು ಎಂದು ಸರ್ಕಾರ ಸ್ಪಷ್ಟವಾದ ನಿಲುವನ್ನು ತಾಳದಿದ್ದರೆ ಇದು ಹಳಿತಪ್ಪುತ್ತದೆ ಎಂಬು ನನ್ನ ಮಾತು.

ಅಧ್ಯಕ್ಷರು: ಬೇಗ ಮುಗಿಸಿ. ಕ್ಲಾರಿಫಿಕೇಷನ್ ಕೇಳುತ್ತೇನೆ ಎಂದು ಮತ್ತೆ original ಭಾಷಣ ಪ್ರಾರಂಭ ಮಾಡಿದರೆ ಹೇಗೆ? I can't understand?

ಶ್ರೀ ಬಿ.ಆರ್.ಪಾಟೀಲ್: ನಾನು ಏನಾದರೂ ರಾಜಕೀಯ ಬುರುಡೆ ಭಾಷಣ ಮಾಡುತ್ತಿದ್ದರೆ ನನ್ನನ್ನು ಕೂರಿಸಿ.

ಅಧ್ಯಕ್ಷರು: ಅವರು ಉತ್ತರವನ್ನು ಹೇಳಿದ್ದಾರೆ. ಕ್ಲಾರಿಫಿಕೇಷನ್ ಕೇಳಿ ಏನೇನು ಅಸಮಾನತೆಗಳು ಇದೆ, ಅದರ ಬಗ್ಗೆ ಮಾತನಾಡಿ. ತಾವು ಆವತ್ತು ಪ್ರಸ್ತಾಪ ಮಾಡಿದ್ದನ್ನು ಮತ್ತೆ ಇವತ್ತೂ ಮಾಡಿದರೆ ಹೇಗೆ?

ಶ್ರೀ ಬಿ. ಆರ್. ಪಾಟೀಲ್: ಅವತ್ತು ಯಡಿಯೂರಪ್ಪನವರು ಇರಲಿಲ್ಲ. ರಾಮಚಂದ್ರೇಗೌಡರು ಇದ್ದರು. ಹಣಕಾಸಿನ ಸಚಿವರು ಆವತ್ತು ಇರಲಿಲ್ಲ. ಅವರ ಗಮನಕ್ಕೆ ಇದನ್ನು ತರದಿದ್ದರೆ ರಾಮಚಂದ್ರೇಗೌಡರಿಗೆ ಏನೂ ಮಾಡಲು ಅಗುವುದಿಲ್ಲ. ಏಕೆಂದರೆ ರಾಮಚಂದ್ರೇಗೌಡರಿಗೆ ತಾಂತ್ರಿಕವಾಗಿ ಯೋಜನಾ ಇಲಾಖೆ ಇದೆ. ಇವತ್ತಿನವರೆಗೆ ಯೋಜನಾ ಇಲಾಖೆಯ ಕಾರ್ಯದರ್ಶಿಗಳು ಮತ್ತು ಅವರ ಸಿಬ್ಬಂದಿ ಕುಳಿತು ಇದರ ಬಗ್ಗೆ ಯಾವುದೇ ಚಿಂತನೆ ಮಾಡಿಲ್ಲ. ಯಾವುದೇ ನಿರ್ದೇಶನ ಕೊಟ್ಟಿಲ್ಲ. ಯೋಜನಾ ಇಲಾಖೆಗೆ consult ಕೂಡ ಮಾಡಿಲ್ಲ. ಎಲ್ಲವೂ ಹಣಕಾಸು ಇಲಾಖೆಯಿಂದ ಹಣ ಹರಿಯಿತು. ಆದರೆ ಇದರಲ್ಲಿ ಯೋಜನಾ ಇಲಾಖೆಯ ಮುಖ್ಯವಾದ ಪಾತ್ರ ಇದೆ. ಏಕೆಂದರೆ Planning ಬಹಳ ಮುಖ್ಯವಾದದ್ದು. ಯೋಜನೆ ಹಣಕಾಸು ಇಲಾಖೆಯಲ್ಲಿ ಅಂತರ್ಗತವಾಗಿರುತ್ತದೆ. ಕೇವಲ ಹಣ ಹಂಚಿ ರಸ್ತೆ, ಕಟ್ಟಡ ಮಾಡಿದರೆ ಸಮಾನತೆ ಬರುವುದಿಲ್ಲ. ಆಯಾಯ ಭಾಗದ ಶೈಕ್ಷಣಿಕ, ಆರೋಗ್ಯ ಮತ್ತು ಸಾಂಸ್ಕೃತಿಕ ಎಲ್ಲಾ ರಂಗದಲ್ಲೂ ಕೂಡ ಸಹಾಯ ಮಾಡಿ ಅವರಿಗೆ ಮೇಲಕ್ಕೆತ್ತುವ ಕೆಲಸ ಮಾಡುವುದಕ್ಕೆ ನಂಜುಂಡಪ್ಪನವರು ಬಹಳ ವಿಸ್ತೃತವಾದ ವೈಜ್ಞಾನಿಕವಾದ ವರದಿಯನ್ನು ಕೊಟ್ಟಮೇಲೆ ಇವತ್ತು ನೀವು ಈ ರೀತಿ ಹಣವನ್ನು ಹಂಚಿಕೆ ಮಾಡಲು ಹೋದರೆ 128 ಕೋಟಿ ನಮಗೆ ಖೋತಾ ಆಗುತ್ತದೆ. ಅಂದರೆ ಯಾರು ಹಿಂದುಳಿದಿದ್ದಾರೆ, ಅವರು ಹಿಂದೆಯೇ ಉಳಿಯಬೇಕು, ಯಾರು ಮುಂದೆ ಹೋಗಿದ್ದಾರೆ, ಅವರು ಇನ್ನೂ ಮುಂದೆ ಹೋಗಬೇಕು. ಕುಡಿಯುವ ನೀರಿಗೋಸ್ಕರ ಕುಡಿಯುವ ನೀರಿನ ಸಚಿವರು 15 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಆ ರೀತಿ ಬಿಡುಗಡೆ ಮಾಡುವಾಗ ಏನು ಹೇಳಿದ್ದಾರೆಂದರೆ ಗಡಿನಾಡಿನ ತಾಲ್ಲೂಕುಗಳಿಗೆ ಮತ್ತು ಅತ್ಯಂತ ದೂರದ ತಾಲ್ಲೂಕುಗಳಿಗೆ ಎಂದು ಹೇಳಿ ಅವರು ಎಷ್ಟೊಂದು ತಪ್ಪು ಮಾಡಿದ್ದಾರೆಂದರೆ, ಕಮಲಾಪುರ ಕ್ಷೇತ್ರ ನನ್ನ

ತಾಲ್ಲೂಕಿನ ಒಂದು ಭಾಗ ಬರುತ್ತದೆ. ಇಡೀ ಒಂದೂವರೆ ಕೋಟಿ ರೂಪಾಯಿ ಕಮಲಾಪುರ ಕ್ಷೇತ್ರಕ್ಕೆ ಕೊಟ್ಟಿದ್ದಾರೆ. ಏಕೆಂದರೆ ಕಮಲಾಪುರದವರು ಬಿ.ಜೆ.ಪಿ. ಶಾಸಕರು. ಅವರು ಬರೀ 6 ಹಳ್ಳಿಗಳಿಗೆ ಮಾತ್ರ ವಿತರಣೆ ಮಾಡಿದ್ದಾರೆ. ಅಂದರೆ 4 ಕಂದಾಯ ವಿಭಾಗಕ್ಕೆ ಸೇರಿರುವ ನನ್ನ 76 ಹಳ್ಳಿಗಳವರು ಏನು ತಪ್ಪು ಮಾಡಿದ್ದಾರೆ. ದಯಮಾಡಿ ರಾಜಕೀಯದ ಮೇಲೆ ಮಾಡಬೇಡಿ. ಇಲ್ಲಿಂದಲೇ ನೇರವಾಗಿ ಹಳ್ಳಿಗಳ ಹೆಸರನ್ನು ಆದೇಶ ಕಳುಹಿಸಬೇಡಿ. ಇದು De-centralize system, Federal system ಈ ರೀತಿ ಆಗಬಾರದು. ಯಾರಾದರೂ ಶಾಸಕರ ಅನುದಾನ ಬಂದರೆ ಶೇಕಡ 40 ಮತ್ತು 60 ರಂತೆ ಹಂಚಿಕೆ ಮಾಡುವ ಪದ್ಧತಿ ಇದೆ. ನನಗೆ 60% ಕೊಡಬೇಕಾಗಿತ್ತು. ಅದೇ ರೀತಿ ಶಾಲೆಗಳು, ಕಾಲೇಜುಗಳನ್ನು ಹಂಚಿದರು. ಅದರ ಬಗ್ಗೆ ವಿವರವಾಗಿ ಮೊನ್ನೆ ಸಧನದಲ್ಲಿ ನಾನು ಹೇಳಿದೆ. ಅನೇಕ ಸಲ ಅದರ ಬಗ್ಗೆ ವಿವರವಾಗಿ ಮೊನ್ನೆ ಸದನದಲ್ಲಿ ನಾನು ಹೇಳಿಗೆ. ಅನೇಕ ಸಲ ಅದರ ಬಗ್ಗೆ ಚರ್ಚೆಯಾಗಿದೆ. ಅತ್ಯಂತ literacyಯಲ್ಲಿ ಹಿಂದುಳಿದಿರುವಂಥ ರಾಯಚೂರು ಜಿಲ್ಲೆಗೆ ಕೇವಲ ಒಂದು ಜೂನಿಯರ್ ಕಾಲೇಜು ಕೊಟ್ಟು ಅಲ್ಲಿ ನೀವು ಸಮಾನತೆ ತರಬೇಕೆಂದು ಹೇಳಿದರೆ ಅದು ಹೇಗೆ ಸಾಧ್ಯತವಾಗುತ್ತದೆ? ಅತ್ಯಂತ ಹಿಂದುಳಿದ ಪ್ರದೇಶವಾಗಿರುವ ಗುಲ್ಬರ್ಗಾ, ಬೀದರ್, ಬಿಜಾಪುರ ಜಿಲ್ಲೆಯಲ್ಲಿ ಇವತ್ತು literacy percent stagnate ಆಗುತ್ತಿದೆ. ಬಿಜಾಪುರ ಜಿಲ್ಲೆಯಲ್ಲಿ SSLC ಪರೀಕ್ಷೆ ಫಲಿತಾಂಶ ರಾಜ್ಯದಲ್ಲಿ 10ನೇ ಸ್ಥಾನದಲ್ಲಿತ್ತು. ಈಗ ಅದು 23ಕ್ಕೆ ಇಳಿದಿದೆ. ಇದಕ್ಕೆ ಕಾರಣವೇನು? ಇದೆಲ್ಲವನ್ನೂ ಹುಡುಕಬೇಕಾದರೆ, Permanent ಆಗಿ ಒಂದು Advisory Committee ಇರಬೇಕು, ಡಾ; ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಗೊಳಿಸುವುದಕ್ಕೆ Permanent ಆಗಿ ತಜ್ಞರ ಒಂದು Advisory Committee ಇರಬೇಕು, ರಾಜಕಾರಣಿಗಳದ್ದಲ್ಲ. ಅವರು ಯಾವ್ಯಾವ ಸಂದರ್ಭಗಳಲ್ಲಿ ಯಾವ್ಯಾವ ಕ್ಷೇತ್ರಗಳಲ್ಲಿ ಎಷ್ಟೆಷ್ಟು ಹಣ ಖರ್ಚು ಮಾಡಬೇಕು, ಮತ್ತು ಯಾವ್ಯಾವ ರಂಗಗಳಲ್ಲಿ ಏನೇನು ಮಾಡಬೇಕೆಂಬುದರ ಬಗ್ಗೆ ಸ್ಪಷ್ಟ ನಿರ್ದೇಶನ ಕೊಡುವುದಕ್ಕೆ Planning Department ಬಹಳ ಮುಖ್ಯ ಪಾತ್ರ ವಹಿಸಬೇಕು. ಅದಕ್ಕೆ ಬೇಕಾದ ಹಣಕಾಸನ್ನು ಮಾನ್ಯ ಹಣಕಾಸು ಸಚಿವರು ಒದಗಿಸಬೇಕು. ಇವತ್ತು ಹಣಕಾಸು ಸಚಿವರು ಹೇಳಿದ್ದಾರೆ, ಮಾತು ಕೊಟ್ಟಿದ್ದಾರೆ. ಏನು ನ್ಯೂನ್ಯತೆಯಾಗಿದೆ, ಅದನ್ನು ತಿದ್ದುಪಡಿ ಮಾಡುತ್ತೇನೆಂತಲೂ ಹೇಳಿದ್ದಾರೆ. ಸರ್, ತಾವೂ ತಿದ್ದುಪಡಿ ಮಾಡಿ, ಹಣಕಾಸು ವಿಷಯದಲ್ಲಿ ನಾವು ಅದನ್ನು ಸ್ವಾಗತಿಸುತ್ತೇವೆ. ಆದರೆ, High School, College, ಇದು ಮೂಲಭೂತ ಶಿಕ್ಷಣ. ಅದು ನಮ್ಮ Constitutrional guarantee 6 ರಿಂದ 14ನೇ ವರ್ಷದವರೆಗೆ...

ಅಧ್ಯಕ್ಷರು: ನಾನು ಪದೇ ಪದೇ ನಿಮಗೆ ಹೇಳುತ್ತಿದ್ದೇನೆ.

ಶ್ರೀ ಬಿ.ಆರ್. ಪಾಟೀಲ್: ಸರ್, ನಾನು ಪದೇ ಪದೇ ಹೇಳುತ್ತಿಲ್ಲ.

ಅಧ್ಯಕ್ಷರು: ನೀವು clarification ಕೇಳಿ, ಅವರು ಉತ್ತರ ಹೇಳುತ್ತಾರೆಂದರೆ, ಮತ್ತೆ ನೀವು ಅದು ಮಾಡಿ, ಇದು ಮಾಡಿ ಎಂದು what is this?

ಶ್ರೀ.ಬಿ.ಆರ್.ಪಾಟೀಲ್: ಸರ್, ಇದು Constitutional guarantee. ನಮ್ಮ education is a Constitutional guarantee. ನಮ್ಮ ಮಕ್ಕಳಿಗೆ ಸಂವಿಧಾನಬದ್ಧ ಸವಲತ್ತುಗಳು ಸಿಗಬೇಕು. ಸವಲತ್ತುಗಳು ಸಿಗಬೇಕಾದರೆ, ಶಾಲೆಗಳನ್ನು ತೆರೆಯಬೇಕು. ಶಾಲೆಗಳನ್ನು ತೆರೆಯಬೇಕಿದ್ದರೆ, ತಾರತಮ್ಯವಾಗಬಾರದು. ಎಲ್ಲವನ್ನೂ ಸಮಾನ ದೃಷ್ಟಿಯಿಂದ ನೋಡಬೇಕು. ಎಲ್ಲಿ ಅಕ್ಷರ ಜ್ಞಾನ ಕಡಿಮೆ ಇದೆಯೋ, ಸಾಕ್ಷರತೆ ಕಡಿಮೆ ಇದೆಯೋ, ಅಂತಹ ಕಡೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹೈಸ್ಕೂಲ್‌ಗಳನ್ನು, ಕಾಲೇಜುಗಳನ್ನು ತೆರೆಯಬೇಕು. ಅದನ್ನೆಲ್ಲಾ ಬಿಟ್ಟು ಬರೀ ಹಾಸನಕ್ಕೆ 10 ಜ್ಯೂನಿಯರ್ ಕಾಲೇಜುಗಳನ್ನು ಕೊಟ್ಟರೆ ಅದು ಸರಿಯಲ್ಲ. ನಾನು ಸತ್ಯಾಂಶ ಹೇಳಬೇಕು. ಸತ್ಯ ಹೇಳಿದರೆ ಏಕೆ ಬೇಸರ?

ಅಧ್ಯಕ್ಷರು: No, No. I cannot allow all these things. ಎಷ್ಟೋ ಸಲ ಇದರ ಬಗ್ಗೆ ಚರ್ಚೆಯಾಗಿದೆ. ಅಸಮಾನತೆ ಬಗ್ಗೆ ಚರ್ಚೆಯಾಗಿದೆ. ಇದರ ಬಗ್ಗೆ ಎಲ್ಲರೂ ಪ್ರಸ್ತಾಪ ಮಾಡಿದ್ದಾರೆ. ಈಗ ಅದಕ್ಕೆ ಉತ್ತರ ಹೇಳುತ್ತಾರೆ. ಉತ್ತರಕ್ಕೆ ನೀವು ಏನಾದರೂ clarification ಕೇಳಿ ಎಂದರೆ, ಮತ್ತೆ ನೀವು original ಭಾಷಣ, ಅದಕ್ಕಿಂತಲೂ ದೊಡ್ಡ ಭಾಷಣ ಮಾಡುತ್ತಿದ್ದೀರಲ್ರಿ, No, ಎಲ್ಲವನ್ನು ಒಂದು ಸೀಮಿತ ಚೌಕಟ್ಟಿನಲ್ಲಿ ಮಾಡಬೇಕು. ನಿಮಗೆ ಪ್ರಸ್ತಾಪಿಸಲು ಬೇಕಾದಷ್ಟು ವಿಚಾರಗಳಿರಬಹುದು. ಆದರೆ, ನಮಗೂ ಬೇರೆ ಬೇರೆ ವಿಷಯಗಳಿವೆಯಲ್ಲ.

ಶ್ರೀ ಬಿ.ಆರ್. ಪಾಟೀಲ್: ಅಧ್ಯಕ್ಷರು ನಮ್ಮ ಮಾತನ್ನು ಕೇಳಬೇಕು. ನೀವು ಅವರ ಮಾತುಗಳನ್ನು ಕೇಳುವುದಕ್ಕೆ ಬಿಡುವುದಿಲ್ಲ, ನಮಗೂ ಮಾತನಾಡಲೂ ಬಿಡುವುದಿಲ್ಲ. ಅಧ್ಯಕ್ಷರೆ, ಈ ತರಹ ಆಗುವುದಕ್ಕೆ ಬಿಡಬಾರದು ಎನ್ನುವುದಕ್ಕೆ ನೀವು ಕೂಡ ಕಾಳಜಿ ವಹಿಸಬೇಕೆಂದು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಕಾಳಜಿ ವಹಿಸಿ ಬೇಕಾದಷ್ಟು ಅವಕಾಶಗಳನ್ನು ಕೊಟ್ಟರೂ ಅಷ್ಟೇ. ಮತ್ತೆ ಮತ್ತೆ ಹೇಳಿದನ್ನೇ ಹೇಳುತ್ತಿರುವುದು. ಬೇರೆ ಬೇರೆ ವಿಷಯಗಳನ್ನು ಪ್ರಸ್ತಾಪಿಸಬೇಕಲ್ಲವೇ? ಬೇರೆಯವರಿಗೂ ಅವಕಾಶ ಕೊಡಬೇಕಲ್ಲ.

ಶ್ರೀ ಬಿ. ಆರ್. ಪಾಟೀಲ್: ಇಲ್ಲಿ ವಿಷಯದ ಮೇಲೆ ಮಾತನಾಡುವ ಯಾರಿಗೂ ಅವಕಾಶವಿಲ್ಲ!

ಅಧ್ಯಕ್ಷರು: No, No, No.

ಶ್ರೀ ಬಿ.ಆರ್.ಪಾಟೀಲ್: ವಿಷಯಾಂತರ ಮಾಡಿ ಮಾತನಾಡುವವರೆಲ್ಲರಿಗೂ ಅವಕಾಶವಿದೆ!

ಶ್ರೀ ಜೆ.ಸಿ. ಮಾಧುಸ್ವಾಮಿ: ಅಧ್ಯಕ್ಷರೆ, ನಾನು 2–3 clarifications ಕೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು, ಡಾ|| ಡಿ.ಎಂ. ನಂಜುಂಡಪಪ್ಪನವರು ಏನು ಹೇಳಿದ್ದಾರೆ, ಒಂದು ಕಡೆ area development ಆಗಬೇಕು. ಇನ್ನೊಂದು ಕಡೆ, individual ಆಗಿಯೂ develop ಆಗಬೇಕು. 17,000 ಚಿಲ್ಲರೆ ಕೋಟಿ ರೂಪಾಯಿಗಳನ್ನು ಸರ್ಕಾರ ಪ್ಲಾನ್‌ನಲ್ಲಿ ಅಳವಡಿಸಿಕೊಂಡಿದ್ದು, ಅಲ್ಪ ಸ್ವಲ್ಪ area development ಮಾಡುವ ಕಾರ್ಯಕ್ರಮಗಳನ್ನೂ ತಾವು ಹಾಕಿಕೊಂಡಿದ್ದೀರಿ. Individual ಆಗಿ ಏನಾದರೂ area development ಮಾಡುವ ಕಾರ್ಯಕ್ರಮ ಇದರಲ್ಲಿ ಅಡಕವಾಗಿದೆಯೇ ಎಂಬುದನ್ನು ಅವರು ಹೇಳಬೇಕು. ಇವತ್ತು ಹಿಂದುಳಿದ ತಾಲ್ಲೂಕುಗಳಲ್ಲಿರುವ ಒಂದೊಂದು ಕುಟುಂಬವೂ ಮೇಲೆ ಬರಬೇಕಾಗಿದೆ. ಡಾ|| ಡಿ.ಎಂ.ನಂಜುಂಡಪ್ಪನವರ ವರದಿ ಪ್ರಕಾರ ನಾನೂ ಹಿಂದುಳಿದ ತಾಲ್ಲೂಕಿನಂದ ಬಂದಿರುವವನಾಗಿದ್ದೇನೆ. ಶೈಕ್ಷಣಿಕವಾಗಿ ಮತ್ತೆ ಸರ್ಕಾರಿ ನೌಕರಿಯಲ್ಲಿ ನಮಗೇನಾದರೂ ಮೀಸಲಿಡುವುದಕ್ಕೆ ನೀವು ತಯಾರಾಗಿದ್ದೀರಾ? ಹಿಂದುಳಿದ ತಾಲ್ಲೂಕಿನ ಮಕ್ಕಳಿಗೆ technical education ನಲ್ಲಿ, higher educationನಲ್ಲಿ ಏನಾದರೂ ಮೀಸಲಾತಿ ಇಡುತ್ತೀರಾ? ಆ ಮಕ್ಕಳಿಗೇನಾದರೂ job opportunities ಹೆಚ್ಚಿಗೆ create ಮಾಡುತ್ತೀರಾ? ಎಂಬುದನ್ನು ಕೇಳಬಯಸುತ್ತೇನೆ. ಏಕೆಂದರೆ, ತಮ್ಮ Public Service Commission ಇರಬಹುದು, ಬೇರೆ ರೀತಿಯ recruitment ಇರಬಹುದು. ಅಲ್ಲಿ ನೀವು ಏನಾದರೂ ಮಾಡಿ. Divisional Level ನಲ್ಲಿ recruitment ಮಾಡಿ ಅಥವಾ ಹಿಂದುಳಿದ ತಾಲ್ಲೂಕುಗಳಿಗೆ ಇಂತಿಷ್ಟು ಕೊಡುತ್ತೇವೆಂದು ಒಂದು priority ಕೊಡುವುದಾದರೂ ಮಾಡಿ, ಏನಾದರೂ ಮಾಡಿ ಆ ಭಾಗದ ಮಕ್ಕಳು ಸ್ವಲ್ಪ ಮೇಲೆ ಬಂದರೆ, ಒಂದು ಕುಟುಂಬವಾದರೂ ಉಳಿದುಕೊಳ್ಳುತ್ತದೆ.

ಅದನ್ನೇನಾದರೂ ಮಾಡಿದ್ದೀರಾ? ಹೇಳಬೇಕು. ಮೂರನೆಯದು, Railway ಬಗ್ಗೆ. ಏನಾದರೂ ಸ್ವಲ್ಪ ಈ ಕಡೆ ಹಳೆಯ ಮೈಸೂರು ಪ್ರಾಂತ್ಯಗಳಲ್ಲಿ ಹೋದರೆ ತಮಗೆ ಗೊತ್ತಾಗುತ್ತದೆ. ಏಕೆಂದರೆ, ಒಂದು ಸಲ transporation mode ಜಾಸ್ತಿಯಾದಲ್ಲಿ, ನಮಗೆಲ್ಲರಿಗೂ ಅಭಿವೃದ್ಧಿ ಸ್ವಲ್ಪ ಹತ್ತಿರವಾಗುತ್ತದೆ. ಅದನ್ನು ಮಾಡುವುದಕ್ಕಾಗುತ್ತದೆಯೇ ಎಂಬುದನ್ನು ತಾವು ಹೇಳಬೇಕು. ನಾಲ್ಕನೆಯದು, ಒಂದು ಕಡೆ ಹೈದ್ರಾಬಾದ್-ಕರ್ನಾಟಕ, ಇನ್ನೊಂದು ಕಡೆ, ಹಿಂದುಳಿದ ತಾಲ್ಲೂಕಿನವರಾದ ನಾವು ಹಳೆಯ ಮೈಸೂರಿನಲ್ಲಿ ಸಿಕ್ಕಿ ಹಾಕಿಕೊಂಡಿದ್ದೇವೆ. ನಮ್ಮ ಗೋಳು ಯಾರಿಗೆ ಹೇಳಿಕೊಳ್ಳಬೇಕೆಂದು ಗೊತ್ತಿಲ್ಲ. ನೀವು ಮಾತನಾಡಬೇಕಾದರೆ, divisional level ನಲ್ಲಿ ಮಾತನಾಡುತ್ತೀರಿ. ನಾವು ಇಲ್ಲಿ ಮಾತನಾಡಬೇಕಾದರೆ, ನಮ್ಮ ತಾಲ್ಲೂಕುಗಳ ವಿಚಾರಗಳನ್ನು ಹೇಳಿದರೆ, ಏನಪ್ಪಾ, ಇದನ್ನೇ ಮಾತನಾಡುತ್ತಾರಲ್ಲ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ ಭಾಗದಲ್ಲಿ ಹಿಂದುಳಿದ ತಾಲ್ಲೂಕುಗಳೇನವೆ, ಅವುಗಳಿಗೆ ಆದ್ಯತೆ ಮೇಲೆ divisionಗೆ ಕೊಡುವ grant ನಲ್ಲಿ ಏನಾದರೂ ನಮಗೆ ಮೀಸಲಿಟ್ಟು ಅಥವಾ ಅಲಾಯಿದ ತೆಗೆದು ಅಭಿವೃದ್ಧಿ ಮಾಡುವುದಕ್ಕಾಗುತ್ತದೆಯೇ ಎಂದು ತಾವು ಹೇಳಬೇಕು.

ಶ್ರೀ ರಾಮಚಂದ್ರಗೌಡ(ಯೋಜನೆ, ಅಂಕಿ-ಸಂಖ್ಯೆ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು): ಮಾನ್ಯ ಅಧ್ಯಕ್ಷರೆ, ನೀವು ಕೇಳಿರುವುದಕ್ಕೆ ಮೊದಲು ನಿಮಗೆ clarify ಮಾಡುತ್ತೇವೆ. ಡಾ:ಡಿ.ಎಂ.ನಂಜುಂಡಪ್ಪನವರ ವರದಿ ಪ್ರಕಾರ 4 ಡಿವಿಜನ್‌ಗಳನ್ನು ಮಾಡಿದ್ದಾರೆ. ಅವು ಯಾವುವೆಂದರೆ, ಗುಲ್ಬರ್ಗ, ಬೆಂಗಳೂರು, ಬೆಳಗಾಂ ಮತ್ತು ಮೈಸೂರು. ಅವರು CCDI ಪ್ರಕಾರ ಗುಲ್ಬರ್ಗ ಡಿವಿಜನ್‌ನಲ್ಲಿ 40% ಎಂದು ಹೇಳಿದ್ದಾರೆ. ನಮ್ಮದು 1,571 ಕೋಟಿ ರೂಪಾಯಿಗಳೇನದೆ, 40% ಪ್ರಕಾರ 628.68 ಕೋಟಿ ರೂಪಾಯಿಗಳನ್ನು ಅದಕ್ಕೆ ಪ್ರತ್ಯೇಕವಾಗಿ ತೆಗೆದಿಟ್ಟಿದ್ದೇವೆ. ಅದೇ ರೀತಿ ಬೆಂಗಳೂರು ಡಿವಿಜನ್‌ಗೆ 25% ಎಂದು ಹೇಳಿದ್ದಾರೆ. ಇದರ ಪ್ರಕಾರ 1,571 ಕೋಟಿ ರೂಪಾಯಿಗಳಲ್ಲಿ 392.875 ಕೋಟಿ ರೂಪಾಯಿಗಳನ್ನು ಪ್ರತ್ಯೇಕವಾಗಿ ಇಟ್ಟಿದ್ದೇವೆ. ಬೆಂಗಳೂರು ಡಿವಿಜನ್‌ಗೆ 20% ಎಂದು ಹೇಳಿದ್ದಾರೆ. ಅದೇ ರೀತಿ 314.300 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಮೈಸೂರು ಡಿವಿಜನ್‌ನಲ್ಲಿ 15% ಇಟ್ಟಿದ್ದಾರೆ. ಅದರ ಪ್ರಕಾರ 235.725. ಕೋಟಿ ರೂಪಾಯಿಗಳು. 1,571 ಕೊಟಿ ರೂಪಾಯಿಗಳಲ್ಲಿ ಗುಲ್ಬರ್ಗಾಕ್ಕೆ 128 ಕೋಟಿ ರೂಪಾಯಿಗಳಷ್ಟು ಕಡಮೆ ಬರುತ್ತದೆಂದು ತಾವು ಹೇಳುತ್ತಿದ್ದೀರಿ. ಅದು ಕಡಿಮೆ ಬರುವುದಿಲ್ಲ. ನಿಮಗೆ ಯಾರೋ wrong

information ಕೊಟ್ಟಿದ್ದಾರೆ. ನಾವಿದನ್ನು ತರ್ಕಬದ್ಧವಾಗಿ ಮಾಡಿದ್ದೇವೆ. ಆದರೆ, ನಾವು ಬೆಳಗಾಂನಲ್ಲಿ 40% ಅಂದರೆ, 628.66 ರಷ್ಟು ಏನು ದುಡ್ಡು ಇಟ್ಟಿದ್ದೇವೆ. ಅದನ್ನು ಅಲ್ಲಿನ ಅತೀ ಹಿಂದುಳಿದವರಿಗೆ, ಅತ್ಯಂತ ಹಿಂದುಳಿದವರಿಗೆ, ಹಿಂದುಳಿದವರಿಗೆ 50:30 ರ ಅನುಪಾತದಲ್ಲಿ ಗುಲ್ಬರ್ಗಾ ಡಿವಿಸನ್‌ನಲ್ಲಿ ಅತ್ಯಂತ ಹಿಂದುಳಿದ 21 ತಾಲ್ಲೂಕುಗಳಿವೆ. ಒಂದೊಂದು ತಾಲ್ಲೂಕಿಗೂ 25.35 ಕೊಟಿ ರೂಪಾಯಿಗಳಂತೆ ಅಲ್ಲಿ ಅತಿ ಹಿಂದುಳಿದ 5 ತಾಲ್ಲೂಕುಗಳಿವೆ. ಆ ತಾಲ್ಲೂಕುಗಳಿಗೆ 15.2 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಗುಲ್ಬರ್ಗಾ ಡಿವಿಜನ್‌ನಲ್ಲಿ 2 ಹಿಂದುಳಿದ ತಾಲ್ಲೂಕುಗಳಿವೆ. ಅಲ್ಲಿನ ಒಂದೊಂದು ತಾಲ್ಲೂಕಿಗೂ 10.2 ಕೋಟಿ ರೂಪಾಯಿಗಳಂತೆ ಕೊಟ್ಟಿದ್ದೇವೆ. ಬೆಳಗಾಂನಲ್ಲಿ 5 ಅತ್ಯಂತ ಹಿಂದುಳಿದ ತಾಲ್ಲೂಕುಗಳಿದ್ದು, 12 ಅತಿ ಹಿಂದುಳಿದ, 14 ಹಿಂದುಳಿದ ತಾಲ್ಲೂಕುಗಳಿವೆ. ಇಲ್ಲಿ ನಾವು ಅವರಿಗೆ ಕೇವಲ 20% ಇಟ್ಟಿರುವ ರೀತ್ಯಾ ಅಲ್ಲಿನ ಒಂದೊಂದು ತಾಲ್ಲೂಕಿಗೂ 17.65 ಕೋಟಿ ರೂಪಾಯಿಗಳಂತೆ ಅತ್ಯಂತ ಹಿಂದುಳಿದ ತಾಲ್ಲೂಕಿಗೆ, ಅತಿ ಹಿಂದುಳಿದ 12 ತಾಲ್ಲೂಕುಗಳಿಗೆ 10.59 ಕೋಟಿ ರೂಪಾಯಿಗಳನ್ನು ಹಿಂದುಳಿದ 14 ತಾಲ್ಲೂಕುಗಳಿಗೆ 7.06 ಕೋಟಿ ರೂಪಾಯಿಗಳು. ಇನ್ನು ಬೆಂಗಳೂರು ಡಿವಿಜನ್.

ಬೆಂಗಳೂರು ಡಿವಿಜನ್‌ನಲ್ಲಿ 11 ಅತ್ಯಂತ ಹಿಂದುಳಿದ ತಾಲ್ಲೂಕುಗಳಿದ್ದು, 13 ಅತಿ ಹಿಂದುಳಿದ, 9 ಹಿಂದುಳಿದ ತಾಲ್ಲೂಕುಗಳಿವೆ. 11 ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ 17.53 ಕೋಟಿ ರೂಪಾಯಿಗಳು, 13 ತಾಲ್ಲೂಕುಗಳಿಗೆ 10.2 ಕೋಟಿ ರೂಪಾಯಿ, 9 ತಾಲ್ಲೂಕುಗಳಿಗೆ 7.02 ಕೋಟಿ ರೂಪಾಯಿ. ಮೈಸೂರು ಡಿವಿಜನ್‌ನಲ್ಲಿ ಅತ್ಯಂತ ಹಿಂದುಳಿದ ಎರಡೇ ತಾಲ್ಲುಕುಗಳಿವೆ. ಅತಿ ಹಿಂದುಳಿದ 10 ತಾಲ್ಲೂಕುಗಳು, ಹಿಂದುಳಿದ 10 ತಾಲ್ಲೂಕು. ಈ ತಾಲ್ಲೂಕುಗಳಿಗೂ 50:30:20 ರ ಅನುಪಾತದಲ್ಲಿ ಅತ್ಯಂತ ಹಿಂದುಳಿದ ಎರಡು ತಾಲ್ಲೂಕುಗಳಿಗೆ 19.64 ಕೋಟಿ ರೂಪಾಯಿಗಳು, ಅತಿ ಹಿಂದುಳಿದ 10 ತಾಲ್ಲೂಕುಗಳಿಗೆ 11.79 ಕೋಟಿ ರೂಪಾಯಿ, ಹಿಂದುಳಿದ 10 ತಾಲ್ಲೂಕುಗಳಿಗೆ 7.86 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದನ್ನು ಯಾವ ರೀತಿ ಹಂಚಬೇಕೆಂಬುದನ್ನು ತೀರ್ಮಾನಿಸಿ ಇವತ್ತು 17 ಇಲಾಖೆಗಳಿವೆ. ಉದಾಹರಣೆಗೆ agriculture, market, training and investment land, soil improvement machinery the equipement price stabilized. ಇಲ್ಲಿ ಮೊದಲನೆಯದರಲ್ಲಿ 5 ಭಾಗಗಳು. ಅದರಲ್ಲಿ ಒಟ್ಟು 117 ಕೋಟಿ ರೂಪಾಯಿಗಳನ್ನಿಟ್ಟು, ಆ 117 ಕೋಟಿ ರೂಪಾಯಿಗಳಲ್ಲಿ ಗುಲ್ಬರ್ಗ ಡಿವಿಜನ್‌ಗೆ 40% ಪ್ರಕಾರವಾಗಿ 44 ಕೋಟಿ

ರೂಪಾಯಿಗಳನ್ನು, ಬೆಳಗಾಂಗೆ 20% ಪ್ರಕಾರ 22 ಕೋಟಿ ರೂಪಾಯಿಗಳನ್ನು, ಬೆಂಗಳೂರಿಗೆ ಶೇಕಡ 25ರಂತೆ 27.5 ಕೋಟಿ ರೂಪಾಯಿಗಳನ್ನು, ಮೈಸೂರಿಗೆ 15% ಪ್ರಕಾರವಾಗಿ 16.5 ಕೋಟಿ ರೂಪಾಯಿಗಳನ್ನು, ಈ ಎಲ್ಲಾ ಡಿವಿಜನ್‌ಗಳಿಗೂ ವ್ಯವಸ್ಥಿತವಾಗಿ ಇರುವ ಹಣವನ್ನು ಡಾ॥ ಡಿ. ಎಂ. ನಂಜುಂಡಪ್ಪ ನವರು ಹಂಚಬೇಕೆಂದು ಏನು ವರದಿ ಕೊಟ್ಟಿದ್ದಾರೆ, ಅದರ ಪ್ರಕಾರವಾಗಿಯೇ ಸಂಪೂರ್ಣವಾಗಿ ಹಂಚಿದ್ದು, ಇಲ್ಲಿ ಯಾವುದೇ ಲೋಪದೋಷಗಳಾಗಿಲ್ಲವೆಂಬ ಅಂಶವನ್ನು ನಿಮ್ಮ ಗಮನಕ್ಕೆ ತರುತ್ತೇವೆ. ಇನ್ನತರೆ, ಸ್ಕೂಲ್, ಕಾಲೇಜ್, ರೈಲು ಏನಿವೆ, ಅವುಗಳು ಅದರಲ್ಲಿ ಬರುತ್ತಿಲ್ಲ. ಈಗ ನಾವು ಒಂದೊಂದು ತಾಲ್ಲೂಕುಗಳಿಗೂ ಹಣ ಕೊಟ್ಟಿದ್ದು, ಆ ತಾಲ್ಲೂಕಿಗೂ ಸಂಬಂದಿಸಿದ ಶಾಸಕರನ್ನೂ ಜೊತೆಯಲ್ಲಿರಿಸಿಕೊಂಡು ಅಲ್ಲಿನ ಡಿ.ಸಿ. ಯಾವ ಕೆಲಸ priority ಯಲ್ಲಿ ಆಗಬೇಕು, ಯಾವ ಕೆಲಸವನ್ನು ಮಾಡಬೇಕು, ಎಂದು ಸೂಚಿಸುತ್ತೇವೆ. ಉದಾಹರಣೆಗೆ 4-5 ಕೆಲಸ ಇರುತ್ತದೆ. 4-5 ಕೆಲಸಕ್ಕೂ ಹಂಚಿ ಎಲ್ಲಾ ದುಡ್ಡು ಬಿಡುಗಡೆ ಮಾಡಿದರೆ ಒಂದೂ ಕೆಲಸ ಸರಿಯಾಗಿ ಆಗುವುದಿಲ್ಲ. ಯಾವುದದರೂ ಒಂದು ಕೆಲಸವನ್ನು ತೆಗೆದುಕೊಂಡು ಪೂರ್ತಿ ಕೆಲಸ ಮಾಡುವುದಕ್ಕೆ ವ್ಯವಸ್ಥೆ ಆಗಬೇಕು. ಆ ರೀತಿಯಲ್ಲಿ ಮಾಡುವಂತಹ ಮಾರ್ಗದರ್ಶನವನ್ನು ಕೂಡ ನಮ್ಮ ಸನ್ಮಾನ್ಯ ಮಂತ್ರಿಗಳು ಮಾಡುತ್ತಾರೆ ಎನ್ನುವ ಭರವಸೆಯನ್ನು ನಮಗೆ ಕೊಡುತ್ತೇನೆ.

ಶ್ರೀ ಬಿ.ಆರ್.ಪಾಟೀಲ್: ಸಾರ್, ತಾವು ಈಗ ಒಂದು ವಿಷಯವನ್ನು ಹೇಳಿದಿರಿ. ಈ ಸೂಚ್ಯಂಕವನ್ನು ಡಾ॥ ನಂಜುಂಡಪ್ಪನವರು ಮಾಡುವಾಗ ಈ ದುಸ್ಥಿತಿ ಸೂಚ್ಯಂಕವನ್ನು ಆಧಾರವಾಗಿಟ್ಟುಕೊಂಡು ಈ ಎಲ್ಲಾ ತಾಲ್ಲೂಕುಗಳನ್ನು ಅತ್ಯಂತ ಹಿಂದುಳಿದ ಪ್ರದೇಶವೆಂದು ಘೋಷಣೆ ಮಾಡಿದರು. ರಾಜ್ಯದ 39 ತಾಲ್ಲೂಕುಗಳಲ್ಲಿ ಅತ್ಯಂತ ಕಟ್ಟ ಕಡೆಗೆ ಇರತಕ್ಕದ್ದು ದೇವದುರ್ಗ. ದೇವದುರ್ಗದಿಂದ ಶುರುವಾಗಿ ನಮ್ಮ ಕನಕಪುರದವರೆಗೂ ಬರುತ್ತದೆ. ಸರ್ಕಾರ ಆದೇಶದಲ್ಲಿ 50:30:20 ಎಂದು ratio fix ಮಾಡಿದ್ದೀರಿ. ಅದಕ್ಕೆ ತಕ್ಕಂತೆ ಬಿಡುಗಡೆ ಮಾಡಲಾಗುವುದು ಎಂದು ಹೇಳಿದ್ದೀರಿ. ನಿಮ್ಮ ಹೇಳಿಕೆಗೆ ಮತ್ತು ನೀವು ಕೊಟ್ಟಂತಹ ವರದಿಗೆ ತದ್ವಿರುದ್ಧ ಆಯಿತು. ಈಗ ತಾವು ಹೇಳಿದಿರಿ,40:25:15 ಇದೇನು ಹೇಳಿದಿರಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ(ಮಾನ್ಯ ಹಣಕಾಸು ಸಚಿವರು):- ನಾನು ಅತ್ಯಂತ ವಿನಯದಿಂದ ಹೇಳುತ್ತೇನೆ. ಮಾನ್ಯ ಬಿ.ಆರ್. ಪಾಟೀಲ್ ಅವರ ಹತ್ತಿರ

ನಾನು ವಿನಂತಿ ಮಾಡುವುದು. ಈ ಅಂಕಿ ಅಂಶಗಳ ಬಗ್ಗೆ ಏನು ಸ್ವಲ್ಪ ವ್ಯತ್ಯಾಸ ಆಗಿದೆ ಎಂದು ಮನವರಿಕೆ ಮಾಡುತ್ತಿದ್ದೀರಿ? ನಾನು ಪ್ಲಾನಿಂಗ್ ಮಿನಿಸ್ಟರ್, ನಿಮ್ಮನ್ನೆಲ್ಲಾ ಕರೆಯುತ್ತೇವೆ. ಪುಟ್ಟ ತಪ್ಪುಗಳು ಆಗಿದ್ದರೆ ಸರಿಪಡಿಸುವ ಪ್ರಾಮಾಣಿಕ ಪ್ರಯತ್ನ ಮ. .:ನೆ. ಇಲ್ಲಿ ನಾನು ಎಲ್ಲರನ್ನೂ ತೃಪ್ತಿ ಪಡಿಸುವುದಕ್ಕೆ ಆಗುವುದಿಲ್ಲ. ನಾನು ಬೇರೆ ಕರೆಯುತ್ತೇನೆ. ದಯಮಾಡಿ ಅಂಕಿ ಅಂಶಗಳ ಬಗ್ಗೆ ಚರ್ಚೆ ಬೇಡ. ಮಾನ್ಯ ಬಿ.ಆರ್. ಪಾಟೀಲ್ ಅವರಿಗೆ ಒಂದು ಮಾತು ಹೇಳುತ್ತೇನೆ. ಉದಾಹರಣೆಗೆ ನಾವು ಮಿನಿ ವಿಧಾನ ಸೌಧಕ್ಕೆ ದುಡ್ಡು ಕೊಡುತ್ತಿದ್ದೇವೆ. ನಾವು ಇದರಲ್ಲಿ ಸೇರಿಸಿಲ್ಲ. ಸೇರಿಸಿದ್ದರೆ ತಪ್ಪೇನೂ ಆಗುತ್ತಿರಲಿಲ್ಲ. ದಯಮಾಡಿ ನಾವು ಅಮೇಲೆ ಚರ್ಚೆಮಾಡೋಣ.

ಶ್ರೀ ಬಿ.ಆರ್. ಪಾಟೀಲ್:- ನಮ್ಮ CRF ಹಂಚುವಲ್ಲಿ ಸಹ ಪರಿಗಣನೆಗೆ ತೆಗೆದುಕೊಳ್ಳಬೇಕು. ನಬಾರ್ಡ್ ಹಂಚುವಲ್ಲಿ ಕೂಡ ಪರಿಗಣನೆಗೆ ತೆಗೆದುಕೊಳ್ಳಬೇಕು. ಆಮೇಲೆ ಈ ಶಾಲಾ ಕಾಲೇಜುಗಳಿಗೆ ಹಂಚುವಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕು. ಆ ಒಂದು ದೃಷ್ಟಿಯಿಂದ ನೀವು ಮೀಟಿಂಗ್ ಕರೆಯುತ್ತೀರಲ್ಲ, ಇದನ್ನು ಎಲ್ಲಾ ಕಾನೂನು ಬದ್ಧವಾಗಿ ನೀವು ಮಾಡಿದರೆ ಅನ್ಯಾಯ ಆಗುವುದಿಲ್ಲ. ಇಲ್ಲದೇ ಹೋದರೆ CRF ಹೋಳೆನರಸೀಪುರಕ್ಕೆ ಹೋಯಿತು. ನಬಾರ್ಡ್ ರಾಮನಗರಂಗೆ ಹೋಯಿತು ಎಂದರೆ ನಾವು ನೀವು ಎಲ್ಲಾ ಸುಮ್ಮನೇ ಬಾಯಿ ಕಟ್ಟಿಕೊಂಡು ಕೂಡಬೇಕಾಗುತ್ತದೆ.

ಅಧ್ಯಕ್ಷರು:- ಮಾನ್ಯ ವೈಜನಾಥ್ ಪಾಟೀಲ್ ಅವರೇ, ಐದು ನಿಮಿಷದಲ್ಲಿ ಮುಗಿಸಿ, ಏನು clarification ಕೇಳಬೇಕೋ ಕೇಳಿಬಿಡಿ.

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ):- ಮಾನ್ಯ ಅಧ್ಯಕ್ಷರೆ, ಈ ಡಾ॥ ನಂಜುಡಪ್ಪನವರ ವರದಿ 2002ರಲ್ಲಿ ಬಂತು. ಅದು 8 ವರ್ಷದಲ್ಲಿ ಇಂಪ್ಲಿಮೆಂಟ್ ಮಾಡಬೇಕೆಂದು ಅವರು ರೆಕ್ಮಂಡ್ ಮಾಡಿದ್ದರು. ದುರ್ದೈವದಿಂದ ಅದು 2002ರಲ್ಲಿ ಪ್ರಾರಂಭ ಆಗಿಲ್ಲ. ಈಗ 2007ರಲ್ಲಿ ತಾವು ಸಮ್ಮಿಶ್ರ ಸರ್ಕಾರದಲ್ಲಿ ಪ್ರಾರಂಭ ಮಾಡಿದ್ದೀರಿ, ಅದರ ಬಗ್ಗೆ ಸ್ವಾಗತ ಮಾಡುತ್ತೇನೆ. ಈಗಲಾದರೂ Initiative ತೆಗೆದುಕೊಂಡಿದ್ದಾರೆ, ಅಷ್ಟಕ್ಕಾದರೂ ಒಪ್ಪಬೇಕು. ಪ್ರತಿ ಒಂದಕ್ಕೂ ವಿರೋಧ ಮಾಡುವುದಲ್ಲ. ಆ ದೃಷ್ಟಿಯಿಂದ ಈ ವರ್ಷ ತಾವೇನು ಹಣ ಕೊಟ್ಟಿದ್ದೀರಿ, ಇದು ಪ್ರತಿ ವರ್ಷ ಹೀಗೆಯೇ ಸಿಗುತ್ತದೆ ಎಂದಲ್ಲ. ಈ ವರ್ಷ ತಾವು ಬಜೆಟ್ ನಲ್ಲಿ 8 ಕೋಟಿ ಇಟ್ಟಿದ್ದೀರಿ. ಇದಕ್ಕೆ Constitutional guarantee ಪ್ರತಿ ವರ್ಷ ಸಿಗಲೇಬೇಕು. ವಿದರ್ಭ ಮಾದರಿಯಲ್ಲಿ Constitution

amendment ಆಗಬೇಕು. ಈ ವರ್ಷ ತಾವು ಹೆಚ್ಚು ಕೊಡಬಹುದು. ಮುಂದಿನ ವರ್ಷ ಮತ್ತೊಬ್ಬರು ಕಡಿಮೆ ಮಾಡಬಹುದು. ಮತ್ತೆ ಆ ನಂತರ ಕಡಿಮೆ ಆಗಬಹುದು. ನಾವು HKDB ಯದು ನೋಡಿದ್ದೇವೆಲ್ಲಾ? ಒಂದು ವರ್ಷ 80 ಕೋಟಿ, ಸಾರಿ 50 ಕೋಟಿ, ಮತ್ತೊಂದು ವರ್ಷ 40 ಕೋಟಿ. ಅದಕ್ಕೆ ಮನಸ್ಸಿನೊಳಗೆ ಹೇಗೆ discretion ಬಂದಿದೆ, ಇದು ಆ ತರಹ ಆಗಬಾರದು. ಡಾ॥ ನಂಜುಡಪ್ಪನವರ ವರದಿ ಪ್ರಕಾರ ನೀವೇನು first time initiative ತೆಗೆದುಕೊಂಡಿದ್ದೀರಿ? ಇದು ಇದೇ ತರದ ಮುಂದೆ ಇರುತ್ತದಾ? ಇದಕ್ಕೆ Constitutional guarantee ಇರಬೇಕು. ಇರಬೇಕಾದರೆ ಅದರ ಸಲುವಾಗಿ ಮಹಾರಾಷ್ಟ್ರಕ್ಕೆ ಆರ್ಟಿಕಲ್ 371ರಲ್ಲಿ ಸೇರಿಸಿ. ವಿದರ್ಭಕ್ಕೆ ಗ್ಯಾರಂಟಿ ಕೊಟ್ಟಿದ್ದಾರೆ. ಅಲ್ಲಿ ಯಾವುದೇ ಫಂಡ್ ಡೈವರ್ಟ ಆಗುವುದಿಲ್ಲ. ಗೌವರ್ನರ್ ಡೈರೆಕ್ಟ್ ಬರುತ್ತದೆ. ಆದರೆ ನಮ್ಮ ಭಾಗದಲ್ಲಿ ಪ್ರತಿ ಒಂದಕ್ಕೂ ನಿಮ್ಮ ಕಡೆಯಿಂದ ನಕಲು ಮಾಡುವುದು ನಮ್ಮದು ಭರಾಟಿ. ಏಕೆಂದರೆ ಮೈಸೂರು ಎಂದು ಬದಲಾವಣಿ ಮಾಡುವುದು ಕೂಡ ಮುಖ್ಯಮಂತ್ರಿಗಳು ನಮ್ಮ ಕಡೆಯಿಂದ ಆಗಿದ್ದರೂ ಕೂಡ ಬಿಜಾಪುರ, ಗುಲ್ಬರ್ಗಾ ಅವರದ್ದು ಯಾರಿಗೂ ಧೈರ್ಯ ಆಗಿರಲಿಲ್ಲ. ಕೊನೆಗೆ ದೇವಾರಾಜ್ ಅರಸ್ ಅವರೇ ಬಂದು ಮಾಡಿದರು. ಮೈಸೂರ್ ಇದ್ದುದು ಕರ್ನಾಟಕ ಎಂದು ಮಾಡುವುದು, ಅಷ್ಟೂ ಆಗಿರಲಿಲ್ಲ. ಕಾವೇರಿ ಹೋರಾಟ ನಡೆಯಿತು ಎಂದರೆ ನಮ್ಮ ಗುಲ್ಬರ್ಗಾ, ಬೀದರ್‌ನಲ್ಲೂ ಹೋರಾಟ ಮಾಡುತ್ತಾರೆ. ಏಕೆಂದರೆ ಇಲ್ಲಿ ಮಾಡುತ್ತಾರೋ ಇಲ್ಲವೋ ಅಲ್ಲಿ ಹೋರಾಟ ಮಾಡುತ್ತಾರೆ. ಅದೇ ಆಲಮಟ್ಟಿ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಹೋರಾಟ ಶುರು ಮಾಡಿದೆವು ಎಂದರೆ ಯಾರೂ ಈಗ ಮಾಡುವುದಿಲ್ಲ. ಈಗ ಬಚಾವತ್ ಟ್ರಿಬ್ಯೂನಲ್ 25–30 ವರ್ಷ ಮೊದಲು ಗಲಾಟಿ ಆಯಿತು. ನಿಮ್ಮ ಮೇಲೆ ಅಲಿಗೇಷನ್ ಮಾಡುವುದಿಲ್ಲ. ನಮ್ಮ ಕಡೆಯವರೇ ಆಗ ಮಾತನಾಡಲಿಲ್ಲ. 1975ರಲ್ಲಿ ಬಚಾವತ್ ಟ್ರಿಬ್ಯೂನಲ್ ಆರ್ಡರ್ ಏನು ಕೊಟ್ಟಿತು, ನಮ್ಮವರೇ ಗಲಾಟೆ ಮಾಡಲಿಲ್ಲ. ನಿಮ್ಮ ಮೇಲೆ ನಾವು ಅಲಿಗೇಷನ್ ಮಾಡುವುದಿಲ್ಲ. ಆದರೆ ಇಲ್ಲಿ ಕಾವೇರಿಯ ವಿಚಾರದಲ್ಲಿ Interim order ಬಂದ ಕೂಡಲೇ ಗಡಬಡ ಶುರು ಮಾಡಿದರು. ಅದಕ್ಕೆ ನಾವು ನಕಲು ಮಾಡುತ್ತೇವೆ. ಹಾಗೆ ಈಗ ಮಾನ್ಯ ಎಸ್. ಎಂ. ಕೃಷ್ಣ ಅವರು ಇಂಟೀರಿಮ್ ಆರ್ಡರ್ ಬಂದ ಕೂಡಲೇ ಪಾದ ಯಾತ್ರೆ ಬೆಂಗಳೂರಿನಿಂದ ಮಂಡ್ಯದವರೆಗೆ ತೆಗೆದುಕೊಂಡರು. ಆವಾಗ ಅವರು ಹೋದಾಗ ನಮ್ಮ ಮಂತ್ರಿಗಳು ಪೂರಾ ಇದ್ದರು. ಅದೇ ಆಲ್ಮಟ್ಟಿ ವಿಚಾರದಲ್ಲಿ ನಾವು ಹೋರಾಟ ಮಾಡಿದೆವು. ಯಾರೂ ಬಂದಿಲ್ಲ. ಏಕೆಂದರೆ ನೀವು

ಮಾಡಿದರೆ ಅಂದರೆ ನಾವು ಮಾಡುತ್ತೇವೆ. ಅದರ ಕಡೆಯಿಂದ ತಾವು ಇಲ್ಲಿಂದ ಏನು ಪ್ರಾರಂಭ ಮಾಡಿದ್ದೀರಿ? ಇದನ್ನು ಇಷ್ಟಕ್ಕೆ ನಿಲ್ಲಿಸಬೇಡಿ. ಆರ್ಟಿಕಲ್ 371 ಕ್ಕೆ ತಿದ್ದುಪಡಿ ತರಲು ತಾವು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತನ್ನಿ. ಅದು 371 ಕ್ಕೆ ತಿದ್ದುಪಡಿ ಆದರೆ ಮಾತ್ರ ನಮಗೆ ಸರಿಯಾಗಿ ನ್ಯಾಯ ಸಿಗಬಹುದು, ಹಣ ಸಿಗಬಹುದು, ಇಲ್ಲದೆ ಇದ್ದರೆ ಸಿಗುವುದು ಸಾಧ್ಯವಿಲ್ಲ. ಇದು ಈ ವರ್ಷ ಮಾಡಿದ್ದೀರಿ. ಮತ್ತೆ ಪುನಃ ಇದೇ ತರಹ ಹೋಗುತ್ತದೆ ಎಂದು ಅಲ್ಲ. ಆ ದೃಷ್ಟಿಯಿಂದ ಡಾ॥ ನಂಜುಂಡಪ್ಪನವರ ವರದಿ ಬಗ್ಗೆ ಏನು ಹೊಸ ಸರ್ಕಾರ ನೀತಿವಹಿಸಿದೆ, ಅದರಲ್ಲಿ ಸ್ವಲ್ಪ ಹಣ ಕೊಡುವುದರಲ್ಲಿ ಕಡಿಮೆ ಇದ್ದರೂ ಸುಧಾರಿಸಿಕೊಳ್ಳುತ್ತೇವೆಂದು ಹೇಳುತ್ತಾರೆ. ಅದರ ಬಗ್ಗೆ ಸ್ವಾಗತ. ಆದರೆ ಬೇರೆ ಕ್ಷೇತ್ರಗಳಲ್ಲಿ ವಿಶೇಷವಾಗಿ ಸ್ಕೂಲ್, ಕಾಲೇಜು ಮತ್ತೊಂದು ಮತ್ತೊಂದು ವಿಷಯದಲ್ಲಿ ಬಹಳಷ್ಟು disparities ಆಗಿವೆ. ಅದೂ ಕೂಡ ಈ ಸರ್ಕಾರ ಸುಧಾರಿಸಿಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು):- ಮಾನ್ಯ ಹಿರಿಯ ಸದಸ್ಯರಾದ ಪಿ.ಜಿ.ಆರ್. ಸಿಂಧ್ಯಾ ಅವರು, ಮಾನ್ಯ ಬಿ.ಆರ್. ಪಾಟೀಲ್ ಅವರು, ಮಾನ್ಯ ವೈಜನಾಥ್ ಪಾಟೀಲ್ ಅವರು, ಮಾನ್ಯ ಮಾಧುಸ್ವಾಮಿ ಅವರುಗಳು ಅನೇಕ ಪ್ರಮುಖವಾದ ವಿಷಯಗಳನ್ನು ಪ್ರಸ್ತಾಪ ಮಾಡಿ ಈ ಒಂದು ವಿಚಾರದಲ್ಲಿ ಬೆಳಕನ್ನು ಚೆಲ್ಲಿದ್ದಾರೆ. ನಾನು ಅದಕ್ಕಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮಾನ್ಯ ಪಿ.ಜಿ.ಆರ್. ಸಿಂಧ್ಯಾ ಅವರು ಈ ಕೈಗಾರಿಕಾ ವಿಕಾಸ ಯೋಜನೆ, ಕೈಗಾರಿಕೆಗಳ ಅಭಿವೃದ್ಧಿ ದೃಷ್ಟಿಯಿಂದ ಕೊಡಬೇಕಾಗಿತ್ತು, ಅದು ಏನಾಗಿದೆ ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. ಅದು ಉದ್ಯೋಗ ಖಾತರಿ ದೃಷ್ಟಿಯಿಂದ ನಿಜಕ್ಕೂ ಬಹಳ ಉಪಯುಕ್ತವಾದಂತಹದು. ಡೆವಲಪ್ಮೆಂಟ್ ದೃಷ್ಟಿಯಿಂದ ಇದರ ಕಡೆ ವಿಶೇಷ ಗಮನವನ್ನು ಕೊಡಬೇಕಾಗಿದೆ. ಅದಕ್ಕೋಸ್ಕರವೇ ಏರ್‌ಪೋರ್ಟ್ ರೈಲ್ವೆ ಕನೆಕ್ಟಿವಿಟಿ ವಿಷಯದ ಬಗ್ಗೆ ವಿಶೇಷ ಗಮನವನ್ನು ಕೊಟ್ಟಿದ್ದೇನೆ. ಕೈಗಾರಿಕಾ ವಿಕಾಸ ಯೋಜನೆಯದ್ದು ಏನಿದೆ, ಅದರ ಸ್ಥಿತಿಗಳನ್ನು ತಿಳಿದುಕೊಂಡು ಖಂಡಿತ ಅವರು ಹೇಳಿದಂಥ ಸಲಹೆ ಕಡೆಗೆ ನಾನು ವಿಶೇಷ ಗಮನವನ್ನು ಕೊಡುತ್ತೇನೆ. ಎರಡನೆಯದಾಗಿ, ಮಾನ್ಯ ಮಾಧುಸ್ವಾಮಿಯವರು ಮಾತನಾಡುವಾಗ, ಈ Area Development ಜೊತೆಗೆ individual developmentಗೂ ವಿಶೇಷ ಗಮನ ಕೊಡಬೇಕೆಂದು ಹೇಳಿದರು. ಅದಕ್ಕೋಸ್ಕರ ಶೈಕ್ಷಣಿಕವಾಗಿ ಹಿಂದುಳಿದ ಈ ಭಾಗದಲ್ಲಿ ಹೆಚ್ಚು ಅನುಕೂಲ ಮಾಡಿ ಕೊಡಬಹುದೇ? ರೈಲ್ವೆ connectivity ಹೆಚ್ಚು ಮಾಡಬಹುದೇ? ಈ ಬಗ್ಗೆ ನೀವು

ಪ್ರಸ್ತಾಪ ಮಾಡಿದ್ದೀರಿ. ಆದರೆ ಮೀಸಲಾತಿ ಅನ್ವಯ ಉದ್ಯೋಗ ಕೊಡಬೇಕಾದರೆ, Constitution amendment ಆಗಬೇಕಾಗುತ್ತದೆ, special status ಇರಬೇಕಾಗುತ್ತದೆ. ಕಾನೂನಿನ ಚೌಕಟ್ಟಿನಲ್ಲಿ ಈಗಿರುವಂತಹ ಸ್ಥಿತಿಯಲ್ಲಿ ನಾವೇನೂ ಮಾಡುವಂತಹ ಸ್ಥಿತಿಯಲ್ಲಿಲ್ಲ. ಅದು ತಮಗೆ ಗೊತ್ತಿರುವಂತಾದ್ದೇ. ಆ ದಿಕ್ಕಿನಲ್ಲಿ ಏನೇನು ಪ್ರಯತ್ನಗಳನ್ನು ಒಟ್ಟಾಗಿ ಮಾಡಬಹುದೋ, ಅದನ್ನು ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ಮಾನ್ಯ ಬಿ.ಆರ್. ಪಾಟೀಲ್‌ರವರು ಸಲಹೆ ಕೊಟ್ಟಂತೆ, ಈ ಡಾ॥ ನಂಜುಂಡಪ್ಪನವರ ವರದಿಯನ್ನು ಅಭ್ಯಾಸ ಮಾಡಿದಂತಹ ಅನೇಕ ತಜ್ಞರಿದ್ದಾರೆ. ಅವರೆಲ್ಲರ ಜೊತೆಗೆ ನಾವು ಸಮಾಲೋಚನೆ ಮಾಡಬೇಕಾಗಿದೆ. ನಾವು ಮಾಡಿರುವಂತಾದ್ದೇ ಅತ್ಯಂತ ಅದ್ಭುತವಾಗಿರುವಂತಾದ್ದು, ಇನ್ನೇನೂ ಇದರಲ್ಲಿ ವ್ಯತ್ಯಾಸಗಳು ಮಾಡದಿರುವಷ್ಟು ಸಾಧನೆಗಳನ್ನು ನಾವು ಮಾಡಿದ್ದೇವೆ ಎಂದು ಹೇಳಿಕೊಳ್ಳಲಿಕ್ಕೆ ನಾವ್ಯಾರೂ ಸಿದ್ಧರಿಲ್ಲ. ಮುಂದೆ ಬರುವಂತಹ ದಿವಸಗಳಲ್ಲಿ ಈ ರೀತಿ ನಂಜುಂಡಪ್ಪನವರ ವರದಿಯನ್ನು ಅಧ್ಯಯನ ಮಾಡಿರುವಂತಹ ಎಲ್ಲಾ ತಜ್ಞರ ಜೊತೆಗೆ ಸಮಾಲೋಚನೆಯನ್ನು ಮಾಡಿ, ನಮ್ಮ ಹಿರಿಯ ಸದಸ್ಯರ ಜೊತೆಗೆ ಸಮಾಲೋಚನೆ ಮಾಡುತ್ತೇವೆ. ಉದಾಹರಣೆಗೆ ಹೇಳುವುದಾದರೆ, ಈ ವರ್ಷ 10% ಎಂದರೆ 1571 ಕೋಟಿ ರೂ.ಗಳನ್ನು ತೆಗೆದಿಟ್ಟಿದ್ದರೆ, ಮುಂದಿನ ವರ್ಷ 20% ಎಂದರೆ 3226 ಕೋಟಿ ರೂ.ಗಳಾಗುತ್ತದೆ. ಆ ಸಂದರ್ಭದಲ್ಲಿ ಏನಾದರೂ ಕೊರತೆಗಳಾಗಿದ್ದರೆ, ಯಾವ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು? ಕೈಗಾರಿಕೆಗೆ ಮತ್ತು ಬೇರೆ ಬೇರೆ ದೃಷ್ಟಿಯಿಂದ ಶಿಕ್ಷಣಕ್ಕೆ ಏನು ಮಾಡಬೇಕು? ಈ ತರಹದಕ್ಕೆ ವಿಶೇಷವಾದಂತಹ ಗಮನವನ್ನು ಕೊಡುತ್ತೇನೆ. ಮಾನ್ಯ ವೈಜನಾಥ್ ಪಾಟೀಲ್‌ರವರೂ ಸಹ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅದೆಲ್ಲಕ್ಕೂ ನಾನು ಈ ಸಂದರ್ಭದಲ್ಲಿ ಉತ್ತರವನ್ನು ಕೊಡುವುದಕ್ಕೆ ಹೋಗುವುದಿಲ್ಲ. ನನ್ನ ಶಕ್ತಿ ಮೀರಿ ಪ್ರಾಮಾಣಿಕವಾಗಿ ಮೊದಲನೇ ಹಂತದಲ್ಲಿ ನಾಲ್ಕು ಹೆಜ್ಜೆ ಮುಂದೆ ಇಡುವಂತಹ ಪ್ರಯತ್ನ ಮಾಡಿದ್ದೇನೆ. ಹಿಂದೆ ಇದ್ದವರು ಮಾಡಲಿಲ್ಲ, ನಾವೇನೋ ದೊಡ್ಡ ಸಾಧನೆ ಮಾಡಿದ್ದೇವೆ ಎನ್ನುವುದಕ್ಕಿಂತ ಇದನ್ನು ಮಾಡಬೇಕೆನ್ನುವಂತಹ ಒಂದು commitment ಈಗ ನಮ್ಮ ಕಡೆಯಿಂದ ಬಂದಿದೆ. ಆ ದಿಕ್ಕಿನಲ್ಲಿ ಪ್ರಯತ್ನ ಸಹ ಆಗಿದೆ. ಮುಂದೆ ಈ ಕೊರತೆಗಳನ್ನು ಸರಿಪಡಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ. ಈಗಾಗಲೇ ತಮಗೆ ಗೊತ್ತಿರುವ ಹಾಗೆ ಮಾನ್ಯ ಪ್ರಧಾನ ಮಂತ್ರಿಗಳು ಬಂದಾಗ, ಅತ್ಯಂತ ವಿನಯದಿಂದ ಈ ಭಾಗದ ಅಭಿವೃದ್ಧಿಗಾಗಿ ಪ್ಲಾನ್‌ನಲ್ಲಿ 3000 ಕೋಟಿ ರೂ.ಗಳನ್ನು ಕೊಡಬೇಕೆಂದು ನಾನು ವಿನಂತಿ ಮಾಡಿದ್ದೇನೆ. ನಾನು ಎಲ್ಲಾ

ಸದಸ್ಯರನ್ನು ಜೊತೆಗೆ ತೆಗೆದುಕೊಂಡು, ಪ್ರಧಾನಿಯವರನ್ನು ಭೇಟಿ ಮಾಡಿ, ಈ ಭಾಗದಲ್ಲಿ ಡಾ॥ ನಂಜುಡಪ್ಪನವರ ವರದಿಯನ್ನು ಅನುಷ್ಠಾನಗೊಳಿಸುವುದಕ್ಕೋಸ್ಕರ ಕೇಂದ್ರದ ನೆರವನ್ನು ಕೋರುತ್ತೇನೆ. ಕೇಂದ್ರವೂ ಇದಕ್ಕೆ ನೆರವನ್ನು ಕೊಡಬೇಕಾಗುತ್ತದೆ. ನಮ್ಮ ಹಣಕಾಸಿನ ಇತಿ ಮಿತಿಯಲ್ಲಿ ನಾವು ಮಾಡುತ್ತಿದ್ದೇವೆ. ನಮ್ಮ ಹಿರಿಯ ಸದಸ್ಯರಾದ ಮಾಜಿ ಹಣಕಾಸಿನ ಸಚಿವರಾದ ಸಿದ್ದರಾಮಯ್ಯನವರು, ಮಾನ್ಯ ಧರ್ಮಸಿಂಗ್‌ರವರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಗಮನಿಸಬೇಕು. ನಾವು ಎಲ್ಲಿಂದ ದುಡ್ಡು ತರೋಣ? ಕೇಂದ್ರ ಏನಾದರೂ ಹೆಚ್ಚಿನ ನೆರವನ್ನು ಕೊಟ್ಟರೆ ನಾವು ಮಾಡಬಹುದು, ಇಲ್ಲದಿದ್ದರೆ ಕಷ್ಟವಾಗುತ್ತದೆ. ಈಗಿರುವ ಹಣದಲ್ಲೇ ಪ್ಲಾನ್ ಅಥವಾ ನಾನ್ ಪ್ಲಾನ್‌ನಲ್ಲಿ ಸ್ವಲ್ಪ ಹಣವನ್ನು ತೆಗೆದಿಟ್ಟು, ಆ ಯೋಜನೆಗೆ ಹಣವನ್ನು ಕೊಡುವಂತಹ ಪ್ರಯತ್ನ ಮಾಡಿದ್ದೇವೆ. ಡಾ॥ ನಂಜುಂಡಪ್ಪನವರ ವರದಿಯಲ್ಲಿ ಏನಿದೆ? 114 ಹಿಂದುಳಿದ ತಾಲ್ಲೂಕುಗಳಿಗೆ 31000 ಕೋಟಿ ರೂ. ಗಳ ಒಂದು ಯೋಜನೆಯನ್ನು ಅವರು ಶಿಫಾರಸ್ಸು ಮಾಡಿದ್ದಾರೆ. 15000ಕೋಟಿ ರೂ.ಜೊತೆಗೆ ವಿಶೇಷ ಅಭಿವೃದ್ಧಿ ಯೋಜನೆ, Special Development Planಗೆ 16000 ಕೋಟಿ ರೂ.ಗಳನ್ನು ಕೊಡುವಂತೆ ಶಿಫಾರಸ್ಸು ಮಾಡಿದ್ದಾರೆ. ಹೀಗೆ ಒಟ್ಟು 31000 ಕೋಟಿ ರೂ.ಗಳಿಗೆ ಅವರು ಯೋಜನೆ ರೂಪಿಸಿದ್ದಾರೆ. ಆ 16000 ಕೋಟಿ ರೂ.ಗಳನ್ನು ಮುಂದಿನ ಎಂಟು ವರ್ಷಗಳಲ್ಲಿ ಹಂಚುವಂತಹ ಪ್ರಯತ್ನವನ್ನು ನಾವು ಮಾಡಿದ್ದೇವೆ. ಅದರಲ್ಲಿ 5% vary ಆಗುತ್ತದೆ, ಅದನ್ನು add ಮಾಡುವಂತಹ ಪ್ರಯತ್ನವನ್ನು ನಾವು ಮಾಡಿದ್ದೇವೆ. ತಾವು ಹೇಳಿದಂತೆ, ನಾಲ್ಕಾರು ವರ್ಷಗಳ ಮುಂಚೆ ಪ್ರಾರಂಭ ಆಗಿರುವಂತದ್ದು, ಬರುತ್ತಾ ಬರುತ್ತಾ ಇವತ್ತು 1 ಕೋಟಿ ರೂ.ಗಳನ್ನು ಖರ್ಚು ಮಾಡುವ ಕಡೆಗೆ 1¼ ಕೋಟಿ ರೂ.ಗಳನ್ನು ಖರ್ಚು ಮಾಡಬೇಕಾಗುತ್ತದೆ ಎನ್ನುವ ಅರಿವು ನನಗೆ ಇದೆ. ಈ ದಿಕ್ಕಿನಲ್ಲಿ ಮುಂದೆ ಇದೆಲ್ಲವನ್ನು ಸಿದ್ಧತೆ ಮಾಡುವಂತಹ ಕಾಲದಲ್ಲಿ ಎಲ್ಲಾ ಹಿರಿಯರ ಅಭಿಪ್ರಾಯವನ್ನು ಪಡೆದು, ಕೇಂದ್ರದ ಮೇಲೆ ಒತ್ತಾಯವನ್ನು ತಂದು, ಹೆಚ್ಚು ಹಣವನ್ನು ತಂದು, ಡಾ: ನಂಜುಂಡಪ್ಪ ವರದಿ ನಿಜಕ್ಕೂ ಅನುಷ್ಠಾನಗೊಂಡು, ಅವರು ನೆಮ್ಮದಿಯಿಂದ ಅವರ ಕಾಲ ಮೇಲೆ ನಿಲ್ಲಬೇಕು ಜೊತೆಗೆ ಇತರ ತಾಲ್ಲೂಕಿನವರೊಂದಿಗೆ ಹೋಲಿಸಿದಾಗ ವ್ಯತ್ಯಾಸವಾಗದಂತೆ ನೋಡಿಕೊಳ್ಳಬೇಕು. ಸ್ವಲ್ಪ ವ್ಯತ್ತಾಸಗಳು ಕೆಲವು ವಿಷಯದಲ್ಲಿ ಆಗಿವೆ. ಶಾಲೆ ಕಾಲೇಜುಗಳನ್ನು ಕೊಡುವುದರಲ್ಲಿ ಎಲ್ಲರನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳಲಿಕ್ಕೆ ಆಗಲಿಲ್ಲ, ತಾರತಮ್ಯವಾಗಿದೆ ಎಂದು ತಾವು ಹೇಳಿದ್ದೀರಿ.

ಶ್ರೀ ಬಿ.ಆರ್. ಪಾಟೀಲ್:- ಕುಡಿಯುವ ನೀರಿನ ವಿಷಯದಲ್ಲೂ ರಾಜಕಾರಣ ಮಾಡಲಾಗಿದೆ

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು):- ಒಂದು ನಿಮಿಷ ಸಾರ್., ಮುಂದೆ ಬರುವ ದಿವಸಗಳಲ್ಲಿ ಏನು ಕೊರತೆಯಾಗಿದೆ ಅದನ್ನು ಪ್ರಮಾಣಿಕವಾಗಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು: ಈಗ ಸದನವನ್ನು 3-45 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 2.43 ಗಂಟೆಗೆ ಮುಂದೂಡಲಾಯಿತು. ಪುನಃ ಸದದನವು ಮಧ್ಯಾಹ್ನ 3.45 ಗಂಟೆಗೆ ತೀರ್ಮಾನಸಿತು)

(ಸದನವು ಮತ್ತೆ ಸಂಜೆ 4 ಗಂಟೆಗೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ಶ್ರೀ ಕೃಷ್ಣಾರವರು ಉಪಸ್ಥಿತರಿದ್ದರು.)

ಶ್ರೀ ಜೆ.ಸಿ.ಮಾಧುಸ್ವಾಮಿ:- ಮಾನ್ಯ ಅಧ್ಯಕ್ಷರೆ, ನಾವು ಮೈಸೂರು ಯುನಿವರ್ಸಿಟಿ ಮೇಲೆ ಚರ್ಚೆ ಮಾಡುವುದಕ್ಕೆ.........

ಅಧ್ಯಕ್ಷರು: ಈಗ ಕರ್ನಾಟಕ ತೋಟಗಾರಿಕೆ ವಿಶ್ವವಿದ್ಯಾಲಯ ವಿಧೇಯಕವನ್ನು ಮಂಡನೆ ಮಾಡಿದ್ದಾರೆ. ಅದನ್ನು ಈಗ ತೆಗೆದು ಕೊಳ್ಳೋಣ.

ಶ್ರೀ ಜೆ.ಸಿ.ಮಾಧುಸ್ವಾಮಿ:- ಮೊದಲು ಇದು ಚರ್ಚೆಯಾಗಲಿ. ಆಮೇಲೆ ಬೇಕಾದರೆ ಅದನ್ನು ತೆಗೆದುಕೊಳ್ಳೋಣ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಆ ಬಿಲ್ಲನ್ನು ದಯವಿಟ್ಟು ಈಗ ಪಾಸ್ ಮಾಡುವುದಕ್ಕೆ ಆಗುವುದಿಲ್ಲ. ಅದರ ಬಗ್ಗೆ ಸ್ಟಡಿ ಮಾಡಬೇಕು. ಈಗ ಆ ಬಿಲ್ ಪಾಸ್ ಮಾಡಬೇಕಾದ ತುರ್ತು ಅಗತ್ಯವೇನೂ ಇಲ್ಲ. ಒಂದು ಹೊಸ ಕಾನೂನು ಮಾಡತಕ್ಕಂತ ಸಂದರ್ಭದಲ್ಲಿ ದೀರ್ಘವಾಗಿ ಅದರ ಮೇಲೆ ಚರ್ಚೆ ಮಾಡಬೆಕಾಗುತ್ತದೆ. ಹೊಸ ಆ್ಯಕ್ಟ್ ಮಾಡುತ್ತಿರುವಾಗ ಚರ್ಚೆ ಇಲ್ಲದೆ ಏಕಾಏಕಿ ಹಾಗೆಲ್ಲ ಬಿಲ್ ಮಾಡುವುದಕ್ಕೆ ಆಗುವುದಿಲ್ಲ ಸಾರ್. ಆ ಬಿಲ್ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಆದುದರಿಂದ ಅದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಬೇಕಾಗುತ್ತದೆ. ಈಗ ಅಂತ ಅರ್ಜೆಂಟ್ ಏನೂ ಇಲ್ಲ.